


## ಓಂ ಶ್ರೀ ಗುರು ಅಕ್ಕಮಹಾದೇವಿ ಲಿಂಗಾಯ ನಮಃ
## ಯೋಗಾಂಗ ತ್ರಿವಿಧಿಯ ಅರ್ಥ

ದಾರ್ಶನಿಕ ದೇವಗಂಗೆ ಜಗನ್ಮಾತೆ ಜಗದಅಕ್ಕ.ಆಧ್ಯಾತ್ಮಿಕ ಅರಸಂಚೆ.ಅಧ್ಯಾತ್ಮದ ತರಂಗಣಿ, ವೀರ ವಿರಾಗಿಣಿ ಅಕ್ಕಮಹಾದೇವಿ ತಾಯಿಯವರು ಲಿಂಗಾಂಗಯೋಗ

ಸಾಧನೆಯಲ್ಲಿ ತಾವು ಕಂಡುಂಡ ಅನುಭವನ್ನ.ಯೋಗಾಂಗತ್ರಿವಿಧಿಯ ತ್ರಿಪದಿಯ ಮುಖಾಂತರವಾಗಿ ತಮ್ಮ ಲಿಂಗಾಂಗಯೋಗ ಸಾಧನೆಯ ದಿವ್ಯಾನುಭವಗಳನ್ನು ಅದ್ಭುತವಾಗಿ ಬರೆದಿದ್ದಾರೆ ಅಂತ ಒಂದು ಯೋಗಾಂಗ ತ್ರಿಧಿಯನ್ನ ಭಕ್ತಿಯಿಂದ ಪಠಣ ಪಠಿಸೋಣ ಭಜಿಸೋಣ.ಓದಿ ಅನುಷ್ಠಾನ ಮಾಡೋಣ, ಆನಂದಿಸೋಣ, ಅನುಭವಿಸೋಣ. ನಮ್ಮ ಬದುಕಿನಲ್ಲಿ ಲಿಂಗಾಂಗ ಯೋಗ ಸಾಧನೆಯನ್ನು ಮಾಡಿ, ಚಿನ್ಮಯಾನಂದ ಕುಡೋಣ ಬನ್ನಿ.

ಅಕ್ಕಮಹಾದೇವಿಯವರು ಬಾಲ್ಯದಲ್ಲಿ ಚೆನ್ನಮಲ್ಲಿಕಾರ್ಜುನನ್ನು ದೇವರು ಎಂದು ಪೂಜೆಸಿದರು, ಬರುಬರುತ್ತಾ ಗಂಡ ಎಂದು ಪೂಜಿಸಿದರು ನಂತರ ಶರಣಸತಿಲಿಂಗಪತಿಯಂದು,ನಂತರ ತಂದೆ, ಮಗಳ, ಸಂಬಂಧ ರೀತಿಯಲ್ಲಿ, ನಂತರ ಗುರುವಿನರೂಪದಲ್ಲಿ ಚೆನ್ನಮಲ್ಲಿಕಾರ್ಜುನನ್ನು ಪೂಜಿಸಿದರು.ಮಲ್ಲಿಕಾರ್ಜುನ ಗುರುವಾಗಿ ಬರುತ್ತನೆ, ಅವರಿಂದ ಅಷ್ಟಸಿಧ್ಧಿ ಎಲ್ಲಾವಿಧ್ಯೆಯನ್ನು ಕಲಿತು, ಬ್ರಹ್ಮ, ವಿಷ್ಣು ಮಹೇಶ್ವರ ಮೇಲಿನ ಆದಿಶಕ್ತಿಯನ್ನು ದಾಟಿ ಮುಂದೆ ಓಂಕಾರಶಕ್ತಿಯಲ್ಲಿ ಬಯಲಗುತ್ತರೆ,

ಅಕ್ಕಮಹಾದೇವಿ ತಾಯಿಯವರು.ತಮ್ಮ ಒಂದು ಜೀವನ.ಮತ್ತು ಜೀವನದ ಆಧ್ಯಾತ್ಮಿಕ ಹೋರಾಟ ಕೊನೆಗೆ ಅಂತಿಮ ಫಲ ಲಿಂಗ ಅನುಭಾವದ ಸುಖ ಆ ಜಗದೊಡೆಯ ಲಿಂಗದೇವನ ಸಾಮರಸ್ಯ.ತನ್ನ ಗುರು ಚೆನ್ನಮಲ್ಲಿಕಾರ್ಜುನ ದೇವರ ದೇವನನ್ನ ಅತ್ಯಂತ ಭಕ್ತಿ.ದಿವ್ಯಾನುಭವದಿಂದ ಒಡೆದು ಒಂದಾಗಿ.ತನ್ನ ಒಂದು ಜೀವನವೇ ಪರಮಾತ್ಮನಡೆಗೆ ಮುಡಿಪಾಗಿಸಿ ಕೊಟ್ಟು. ಅವನೊಳಗೆ ಒಂದಾಗಿರುವ ನಿಲ್ಲುವ ಅಕ್ಕಮಹಾದೇವಿ ತಾಯಿಯವರು ಲಿಂಗಾಂಗ ಯೋಗ ಸಾಧನೆಯಲ್ಲಿ ಮಾಡತಕ್ಕಂತ ಸಾಧಕರು. ಈ ಒಂದು ತ್ರಿಪದಿಗಳನ್ನ ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿಗಳನ್ನು ಭಕ್ತಿಯಿಂದ ರಾಗದಿಂದ ಓದಿ ಅದನ್ನು ಅನುಭವಿಸಿದರೆ ಖಂಡಿತವಾಗಿಯೂ ಲಿಂಗಾಂಗ ಯೋಗ ಸಾಧನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಆ ಜಗದೊಡೆಯ.ಚಿನ್ಮಯಾನಂದನಲ್ಲಿ ಹೊಡೆದು ಒಂದಾಗಬಹುದು. ಹಾಗಾಗಿ ಅಂತ ಒಂದು ಅಧ್ಯಾತ್ಮಿಕ ಅರಸಂಚೆ ತರಂಗಿಣಿನ್ನು ಆದರ್ಶವಾಗಿಟ್ಟುಕೊಂಡು ನಾವು ಸಾಗೋಣ. ಪ್ರೀತಿಯಿಂದ ಲಿಂಗಾಂಗ ಸಾಮರಸ್ಯ ಸುಖವನ್ನು ಅನುಭವಿಸುವ.

ಅಕ್ಕಮಹಾದೇವಿಯವರು ಬರೆದಿರುವ ಯೋಗಾಂಗ ತ್ರಿವಿಧಿ ಯೋಗಾಂಗ ತ್ರಿವಿಧಿ ಎಂದರೇನು? ಯೋಗಾಂಗ ತ್ರಿವಿಧಿ ಅಂದರೆ ಶರೀರವನ್ನು ಗಟ್ಟಿ ಮಾಡಿಕೊಳ್ಳುವುದು ಒಂದು ಮನಸ್ಸನ್ನು ತನ್ನದು ತಾನು ಅನ್ನುವಂತ ನೆಲೆಯಲ್ಲೇ ಮೈದುಂಬಿ ನಿಲ್ಲಿಸುವುದು. ಒಂದು ಎರಡನ್ನು ಕಳೆದುಲಿಂಗ ಭಾವದಲ್ಲಿ ಸಂಪೂರ್ಣವಾಗಿ ತನ್ನನ್ನು ತಾನು ಅಳಿದು ಕೂಡುವುದು. ಇನ್ನೊಂದು ಈಶರೀರವನ್ನು ಹಿಡಿದು ಸಾಧನೆ ಮಾಡುತ್ತೇವೆ. ಈ ಸಾಧನೆಗೆ ಪೂರಕವಾದ ಶರೀರವನ್ನು.ತ್ಯಾಗಾಂಗ ಅಂತ ಹೇಳುತ್ತೇವೆ. ನಾವು ಯಾವ ಸಾಧನೆಯಿಂದ ನಾನು ಮಾಡಿದೆ ಅನ್ನುವ ವ್ಯವಸ್ಥೆಯನ್ನು ತುಂಬಿಕೊಂಡು ಇದನ್ನ ನಾನು ಅನುಭವಿಸುತ್ತೇನೆ. ಇತರ ಅಧಿಕಾರಿ ನಾನು ಇದರ ವ್ಯವಸ್ಥೆ ನನ್ನದು ಎನ್ನುವ ಆಲೋಚನೆ ಮಾಡುವಂಥ ಭಾಗವನ್ನು ಭೋಗಾಂಗ ಅಂತ ತಿಳಿಯುತ್ತೇವೆ.

ತ್ಯಾಗಾಂಗ ಅಂದರೆ ಒಂದು ವೂವಿನ ಗಿಡವಿದ್ದಂತೆ. ಭೋಗಾಂಗ ಅಂತ ಹೇಳಿದರೆ ಅರಳಿದವೂ ಇದ್ದಂತೆ. ಯೋಗಾಂಗ ಅಂತ ಹೇಳಿದರೆ ಆ ಹೂವಿನಿಂದ ಹೊರ ಬರುವ.ನಿರಾಲಂಬವಾಗಿರುವಂತಹ ಸುಗಂಧ ಇಲ್ಲಿ ಅಕ್ಕಮಹಾದೇವಿ ತಾಯಿಯವರು ಸಾಧನೆಯಲ್ಲಿ ಅರಳಿದವುವಾಗಿ ತನ್ನ ಸುಗಂಧವನ್ನು ಎಲ್ಲರಿಗೆ ಹಂಚಿ ಕೊಡುವಂತಹ ರೀತಿಯಲ್ಲಿ ಯೋಗಾಂಗ ತ್ರಿವಿಧಿಯನ್ನು ಬರೆದಿದ್ದಾರೆ.

ಯೋಗಾಂಗ ತ್ರಿವಿಧಿಯ ಅರ್ಥ ಹೇಳುವ ಚಿಕ್ಕ ಪ್ರಯತ್ನ ಮಾಡಿದ್ದೇನೆ. ಅಕ್ಕಮಹಾದೇವಿಯವರ ಯೋಗಾಂಗ ತ್ರಿವಿಧಿಯಲ್ಲಿ ಒಂದು ವಿಶೇಷತೆ ಇದೆ. ಯೋಗಾಂಗ ಅನ್ನುವುದು ಅತ್ಯಂತ ಸರಳವಾಗಿ ಇರುವಂಥದ್ದು.ಜನಪದ ಶೈಲಿಯಲ್ಲಿ ತ್ರಿಪದಿಗಳಲ್ಲಿ ಇವರು ಇದನ್ನು ಹೇಳಿದ್ದಾರೆ. ಸರಳವಾಗಿ ಕಂಡರೂ ಅದರ ಅನುಭವ ಆಳ ಮತ್ತು ಎತ್ತರ ಬಹಳ ವಿಶಿಷ್ಟವಾದ ರೀತಿಯಲ್ಲಿ ಇದೆ.

ಎಷ್ಟು ಗಹನಗಾಂಭೀರ್ಯವಾದಂತಹ ವಿಚಾರಗಳನ್ನು ಅತ್ಯಂತ ಸರಳ, ಸುಂದರವಾಗಿ ನಮ್ಮ ಮನಸ್ಸು ಮನದಾಳಕ್ಕೆ ತಂದುಕೊಡುವ ಒಂದು ವಿಶಿಷ್ಟವಾದಂತಹ ಘನತೆ. ಗಾಂಭೀರ್ಯತೆ  ಇದರಲ್ಲಿ ಕಾಣುತ್ತೇವೆ. ಇಂತಹ ವಿಶೇಷತೆಯನ್ನು ಪರಿಚಯ ಮಾಡಿಕೊಡುವ ಚಿಕ್ಕ ಪ್ರಯತ್ನ ನಮ್ಮದು.

ಈ ತ್ರಿಪದಿಗಳನ್ನು ಇಟ್ಟುಕೊಂಡು ನಾವು ನಮ್ಮ ಅಂತರಂಗದ ಸಾಧನೆಯನ್ನು ಎತ್ತರವನ್ನು ಬೆಳಕನ್ನು ಕಂಡುಕೊಳ್ಳುವ ವಿಶಿಷ್ಠವಾದ ವ್ಯವಸ್ಥೆ ಇದು. ನಾವು ಶಬ್ದಗಳನ್ನು ಮಾತ್ರ ಗಮನಿಸುತ್ತೇವೆ. ಆದರೆ ಶಬ್ದದೊಳಗಣ ನಿಶ್ಶಬ್ದವನ್ನು ಗಮನಿಸುವುದಿಲ್ಲ.ಶಬ್ದಕ್ಕೆ ಇತಿಮಿತಿ ಇದೆ. ಆದರೆ ನಿಶ್ಶಬ್ದ ಸೀಮಾತೀತ. ಈ ಮಾತನ್ನು ಅಂತರಂಗವನ್ನು ಯಾವ ರೀತಿಯಾಗಿ ಗಮನಿಸಬೇಕು ಅನ್ನುವುದು ಅಕ್ಕಮಹಾದೇವಿಯವರು,  ಯೋಗಾಂಗ ತ್ರಿವಿಧಿ.ನಮ್ಮ ಒಳನೋಟದ ಒಂದು ಮಾರ್ಗವನ್ನು ಸರಳವಾಗಿ, ಸುಂದರವಾಗಿ ಕೈ ಹಿಡಿದುಕೊಂಡು ಹೋಗುವುದನ್ನು ನಾವು ಇಲ್ಲಿ ಗಮನಿಸಬಹುದು. ಅಕ್ಕಮಹಾದೇವಿಯವರು ಮೊದಲು ಒಂದು ತ್ರಿಪಧಿಯನ್ನು ಬಹಳ ಅದ್ಭುತವಾಗಿ ವ್ಯಕ್ತಪಡಿಸಿದ್ದಾರೆ.

### 1) ಶ್ರೀ ಮಹಾಮಹಿಮನೆ ಸೋಮಶೇಖರ ಗುರುವೆ.
### ಕಾಮಿತ ಫಲವ ಕೊಡು ಕಂಡಾ ಎನ್ನ ಹೃ-
### ತ್ಕಮಲದೊಳ್ ನಿಂದು ಮೇರೆ ಕಂಡಾ

ಸಾಧಾರಣವಾಗಿ ತಾನು ಮಾಡುತ್ತೇನೆ ಅನ್ನುವ ವ್ಯವಸ್ಥೆಯನ್ನು ತಾನು ಇಲ್ಲದೆ ಮಾಡುವಂತಹ ಸಹಜ ಪ್ರವೃತ್ತಿ ನಮ್ಮ ಶರಣರದು. ಆ ಲೆಕ್ಕದಲ್ಲಿ ತನ್ನ ಮನದಾಳದ ಅನುಭವವನ್ನು ಶಾಬ್ದಿಕವಾಗಿ ವ್ಯಕ್ತಪಡಿಸಬೇಕಾದರೆ ಅದು ನಾನಲ್ಲ. ಅದು ನೀನೆ ಎಲ್ಲ ಅನ್ನುವಂತಹ ರೀತಿಯಲ್ಲಿ ಏಳುವಂತದ್ದು.ಮಹಾಮಹಿಮನೆ ಅಂದರೇನು? ಪರಮಾತ್ಮ ಅಗಮ್ಯ, ಅಗೋಚರ ಅಪ್ರತಿಮ.

ಈ ಸಾಧನೆಯ ಸಂಪೂರ್ಣವಾಗಿ ಇರುವಂತಹ ನೆಲೆಗೆ ಬಂದಾಗ ಒಂದು ವಿಶೇಷಣ ಕೊಡ ಬೇಕು.ನೋಡಿ ದೇವರುಗಳು ಅಂತೇಳಿ ನೂರೆಂಟು ಸಾವಿರಾರು ಹೆಸರುಗಳು ಏನು ಹೇಳುತ್ತೇವೆಯಲ್ಲ ಅದು ನಾವು ಕಂಡುಕೊಂಡ ವಿಶೇಷಣಗಳೇ ಹೊರತು ಅದು ದೇವರು ಹೆಸರು ಅಲ್ಲ. ಅದನ್ನು ನಾವು ವಿಶೇಷವಾಗಿ ಗಮನಿಸಬೇಕು. ಸೋಮಶೇಖರ ಅಂದರೆ ಏನು?

ಅದಕ್ಕೆ ಅರ್ಥ ನಾವು ಚಿತ್ರ ಬಿಡಿಸಿಬಿಟ್ಟೆವು. ಶಿವನ ತಲೆಯಲ್ಲಿ ಚಂದ್ರನನ್ನು ಇಟ್ಟರು.ಹೊರಗಡೆ ಚಂದ್ರಧರ ಸೋಮಶೇಖರ ಶಿರದಲ್ಲಿ ತನ್ನ ತಲೆಯಲ್ಲಿ ಚಂದ್ರನನ್ನು ಇಟ್ಟುಕೊಂಡವನು. ಇದರರ್ಥ ಏನು? ಇದೊಂದು ಹೊರೆಗಿನ ಶೃಂಗಾರ ನಾ ಅದು ಅಲ್ಲ.ಇದನ್ನು ವಿಶೇಷವಾಗಿ ಗಮನಿಸಬೇಕು. ನಾವು ಯಾರು ಸಾಧನೆಯಿಂದ ತನ್ನ ಅಂತರಂಗದಲ್ಲಿ ಪರಿಪೂರ್ಣವಾಗಿರುವಂತ ಯೋಗಿಕ ಕ್ರೀಯೆಗಳನ್ನು ಸಹಸ್ರಾರದಳ ಪದ್ಮದಲ್ಲಿ ಅರಳಿಸಿದಾಗ ಅಲ್ಲಿ ಉತ್ಪತ್ತಿಯಾಗುವಂತಹ ಅಮೃತ ಇದೆಯಲ್ಲ. ಆ ಅಮೃತ ಚಂದ್ರನನ್ನು ಸಂಕೇತದಿಂದ.

ಹೇಳುತ್ತೇವೆ ಅಮೃತ ಸಂಕೇತವನ್ನು ಚಂದ್ರ ಅಂತ ಹೇಳುತ್ತೇವೆ. ತನ್ನ ಸಾಧನೆಯಲ್ಲಿ ವಿಶೇಷವಾಗಿರುವಂತಹ ಒಂದು ಅದ್ಭುತವಾದ ಪರಮಾನಂದ ಮಹಾ ಅಮೃತಾ ಸಹಸ್ರಾರ ಪದ್ಮದಲ್ಲಿ ಕಂಡಾಗ ಅದು ಇಡೀ ನಮ್ಮ 72,000 ನಾಡಿ ಮಾರ್ಗವನ್ನು ಸಂಪೂರ್ಣವಾಗಿ ಶಾಂತಗೊಳಿಸುವ ನೆಲೆಯಲ್ಲಿ ಅದನ್ನು ನಾವು ಅಮೃತ ರಸಧಾರೆ ಎಂದು ಹೇಳುತ್ತೇವೆ. ಅದನ್ನ ಚಂದ್ರ ಅಂತ ಹೇಳುತ್ತೇವೆ.

ಏಕೆಂದರೆ ಚಂದ್ರ ಅಮೃತದ ನೆಲೆಯಲ್ಲಿ ಮೂಡಿಬಂದವಾ ಅನ್ನುವ ವ್ಯವಸ್ಥೆಯಲ್ಲಿ ಇದೆ. ಅಂದರೆ ತನ್ನ ಋುತ್ ಕಮಲ ನೆಲೆಯಿಂದ ತನ್ನ ಸಾಧನೆಯನ್ನ ಬ್ರಹ್ಮರಂಧ್ರಕ್ಕೆ ತೆಗೆದುಕೊಂಡು ಹೋಗಿ ಆ ಕಮಲದಲ್ಲಿ ಚಂದ್ರನನ್ನು ಧರಿಸಿರುವುದನ್ನು ಸಹಜವಾಗಿ ಸೋಮಶೇಖರ ಅಂತ ಹೇಳಿದ್ದಾರೆ. ಸಹಸ್ರಾರದ ಕಮಲದಲ್ಲಿ ನೆತ್ತಿಯ ಮೇಲೆ ಆಧ್ಯಾತ್ಮದ ಅನುಭವ ರಸಧಾರೆ ಸಹಜವಾಗಿ ಮೂಡಿ ಬರುತ್ತದೆ.ಅವನು ಚಂದ್ರಧಾರ ಅದನ್ನ ನಾವು ಲೌಕಿಕವಾಗಿ ಉದಾಹರಣೆ ಕೊಟ್ಟೆವು. ನಾವೇನು ಮಾಡಿದ್ದೀವಿ?ಅದನ್ನು ಚಿತ್ರವಾಗಿ ಇಟ್ಟುಕೊಂಡಿವಿ ಚಿತ್ರಣವಾಗಿ ಅಷ್ಟೇ ಉಪಯೋಗಿಸುವುದನ್ನು, ಚಿತ್ರವಾಗಿ ಪೂಜಿಸುವುದನ್ನು ಕಲಿತೆವು.

'ಕಾಮಿತದ  ಫಲ ಯಾವುದು'? ಇಲ್ಲಿ ನೆತ್ತಿಯಲ್ಲಿ ಮೂಡಿಬರುವಂತಹ ಆ ಒಂದು ಸುಧಧಾರೆ ಆ ಒಂದು ಪರಮಾನಂದ ಅಮೃತ ಇಡೀ ಶರೀರದಲ್ಲಿ ಇರುವಂತಹ 72,000 ನಾಡಿ ಮಾರ್ಗವನ್ನು ಆವರಿಸಿ ಇಡೀ ಶರೀರವನ್ನು ಒಂದು ರೀತಿಯಲ್ಲಿ ಪ್ರಭಾವಕ್ಕೆ ಅಂದರೆ ಪ್ರಕಾಶದ ನೆಲೆಗೆ ತೆಗೆದುಕೊಂಡು ಹೋಗುತ್ತದೆ.ಅದೇ ಕಾಮಿತದ ಫಲ,ಭಗವಂತ ನಮ್ಮೊಳಗೆ ಇರುವಂಥ ಆತ್ಮ ಚೈತನ್ಯ ಒಂದು ವಿಶೇಷವಾದ ರೀತಿಯಲ್ಲಿ ಇಡೀ ನಮ್ಮ ಶರೀರ ಬೆಳಕಿನ ಪುಂಜವಾಗುವಂತ ನೆಲೆ ಇದೆಯಲ್ಲ ಅದನ್ನು ಕೊಡು ಜಗತ್ತಿಗೆ ಬೆಳಕನ್ನು ಚೆಲ್ಲುವಂತಹ ದೀಪ. ಅದು ಎಲ್ಲ ಕಿರಣಗಳನ್ನು ಹೊರಗೆ ಕಳಿಸುತ್ತದೆ. ಆದರೆ ಅದರ ಅಂತರಂಗದಲ್ಲಿ ಜ್ಯೋತಿ ಸಹಜವಾಗಿ ಇರುತ್ತದೆ.ಅದನ್ನು ಇಲ್ಲಿ ಹೇಳುತ್ತಾರೆ. ಅಕ್ಕಮಹಾದೇವಿ ತಾಯಿಯವರು
'ಎನ್ನ ಹೃತ್ಕಮಲದೊಳ್ ನಿಂದು ಮೇರೆ ಕಂಡಾ
 ಒಂದು ಸಹಜವಾದ ರೀತಿಯಲ್ಲಿ ಸರಳವಾದಂತ ಲೆಕ್ಕದಲ್ಲಿ ಏಳುವಂತಹ.ಒಂದು ಪ್ರಸಂಗ ತನ್ನ ಒಳಗಿನ ಚೈತನ್ಯ, ಅವ್ಯಕ್ತ ಚೈತನ್ಯ ವ್ಯಕ್ತವಾಗಿ.ಇಡೀ ಶರೀರವನ್ನು ಆವರಿಸಿ ಪರಿಪೂರ್ಣವಾಗಿ ತನಗೆ ತನ್ಮಯಗೊಳಿಸುವಂಥ ನೆಲೆಯಲ್ಲಿ ಈ ಶರೀರವೇ ಒಂದು ಪ್ರಪಂಚ. ಇದನ್ನು ಸಂಪೂರ್ಣವಾಗಿ ಬೆಳಕನ್ನು ಮೂಡಿಸಿಕೊಂಡು ಬೆಳಕಾಗಿ ಕಾಣುವಂತ ವಿಧಾನ ಇದೆಯಲ್ಲ. ಆ ವಿಧಾನದ ಪ್ರಾರ್ಥನೆ ಇಲ್ಲಿ ಈ ತ್ರಿವಿಧಿಯಲ್ಲಿ ನಾವು ನೋಡಬೇಕಾದ್ದು ಸಹಜವಾಗಿ ತನ್ನ ಸಾಧನೆಯಿಂದ ಒಬ್ಬ ಮನುಷ್ಯ ಸಂಪೂರ್ಣವಾಗಿ ಜ್ಯೋತಿ ಸ್ವರೂಪನಾಗಿ ಹೇಗೆ ಆಗುತ್ತಾನೆ ಅಂತನ್ನುವ ನೆಲೆಯಲ್ಲಿ ಎರಡು ಹಳಿಲು ಕೊಡುವಂತ ಒಂದು ಅದ್ಭುತವಾದ ಮಾರ್ಗ.

 ತಾನು ತನ್ನದು ಅಂತನ್ನುವುದು ಬಿಟ್ಟು ಇಲ್ಲಿ ಎರಡು ಇಲ್ಲವೇ ಇಲ್ಲ ಅಂತ ಅನ್ನುವಂತಹ ವ್ಯವಸ್ಥೆ ತಲುಪುವುದು. ಈ ದಾರಿಯ ನೆಲೆಯಲ್ಲಿ ಅಕ್ಕಮಹಾದೇವಿ ತಾಯಿಯವರು ಯಾವ ರೀತಿಯಾಗಿ ಸಾಧನೆ ಮಾಡಿದರುನ್ನುವಂತ ಅದನ್ನು ಲೋಕಹಿತಕ್ಕಾಗಿ ದಾಸೋಹಂ ಭಾವದಿಂದ ನಮಗೆ ಬರೆದಿದ್ದಾರೆ. ಈ 67 ತ್ರಿಪದಿಗಳು ಮುಖಾಂತರವಾಗಿ ಅದನ್ನು ನಮ್ಮ ಮುಂದೆ ತೆರೆದು ಇಟ್ಟಿದ್ದಾರೆ.ಇದು ಬಹಳ ಅದ್ಭುತ. ಈ ಮಹಾ ಯೋಗಾಂಗ ತ್ರಿವಿಧಿಯು ನಮ್ಮ ಬಳಿ ಇದೆ. ಆದರೆ ಅದನ್ನು ನಾವು ತೆಗೆದು ನೋಡಿಲ್ಲ.ಅದರ ಒಳ ಅರ್ಥವನ್ನು ಕಂಡುಕೊಂಡಿ ಇಲ್ಲ. ನಾವು ಯಾವುದೇ ಒಂದು ಪ್ರಸಂಗ ಪರಿಪೂರ್ಣವಾಗಿ ಬರಬೇಕಾದರೆ ಅದು ಮೊದಲು ನಾದ ಮುಖಾಂತರವಾಗಿ ಬರುತ್ತದೆ. ನಂತರ ನಾದ ಒಂದು ಕಡೆಗಮನವಾಗಿ ಬಿಂದುವಾಗಿ ಅದು ನಮ್ಮ ಅನುಭವಕ್ಕೆ ಬಂದಾಗ ಕಾಲಸ್ವರೂಪವನ್ನು ತಲುಪುತ್ತದೆ.ನಾದ ಬಿಂದು ಕಲೆ ಮತ್ತೆ ಮತ್ತೆಯುಗಳು ತ್ರಿಪದಿಗಳಲ್ಲಿ ಬರುವುದನ್ನು ನಾವು ನೋಡುತ್ತೇವೆ.

2) ಮೊದಲು ಮಾಡುವೆ ನಾನು ಸದಮಲ ಗುರುವಿನ
ಮೃದು ಪಾದಗಳನ್ನು ಬಲಗೊಂಡು ತತ್ವದ
ಚತುರ ಪದಗಳನ್ನತ್ತು ಮುದದಿಂದ.
ನಮಗೆ ಯಾವುದೇ ಕೆಲಸ ಪ್ರಾರಂಭವಾಗಬೇಕಾದರೆ ಮೊದಲು ಗುರುಗಳ ಅನುಗ್ರಹ ಬೇಕು. ಗುರು ಎಂದರೆ ಅರಿವು ಅರಿವೆ ಗುರು ಅಂತ ಹೇಳಿದರು. ಅರಿವಿನ ಕಡೆಗೆ ನಮ್ಮನ್ನು ಕರೆದುಕೊಂಡು ಹೋಗುವಂತವರು ಗುರುಗಳು.ಆದರೆ ಅರಿವು ಮೂಡಬೇಕಾದದ್ದು ನಮ್ಮ ಹೃದಯದಲ್ಲಿ ಅದು ಅರಿವಿನ ಆದಿಯಲ್ಲಿ ಹೇಳುತ್ತವೆ. ಈ ಹಾದಿಯಲ್ಲಿ ಹೋಗದಿದ್ದರೆ ಅರಿವಿನ ಪ್ರಯೋಜನವಾಗುವುದಿಲ್ಲ. ಅರಿವಿನ ಅನುಭವ ಆಗುವುದಿಲ್ಲ.ಹೊರಗಡೆ ಗುರು ಸ್ಥೂಲವಾಗಿ ನಮ್ಮ ಕಣ್ಮುಂದೆ ಕಾಣಿಸುತ್ತಾರೆ.

 ನಮ್ಮ ಅಂತರಂಗ ಅರಿವಾಗಿ ಅವರು ಸಂಪೂರ್ಣವಾಗಿ ಸೂಕ್ಷ್ಮ ಶರೀರದಲ್ಲೇ ತಮ್ಮ ಶರೀರದ ಒಳಗೆ ಸೇರುತ್ತಾರೆ. ಅದು ಸಂಪೂರ್ಣವಾಗಿ ಆಚರಣೆಗೆ ಬಂದಾಗ ಅನುಭವದ ನೆಲೆಯಲ್ಲಿ ವಿಶಿಷ್ಟವಾಗಿ ಇಡೀ ಜಗತ್ ಭರಿತ ಜಂಗಮ ಚೇತನವಾಗಿ ಕಾಣುವುದನ್ನು ನಾವು ನೋಡುತ್ತೇವೆ. ಯಾವುದೇ ಒಂದು ಕೆಲಸ ಮಾಡಬೇಕಾದರೆ ಮೊದಲು ಅರಿವು ಇರಬೇಕು ಅರಿತು ಹೆಜ್ಜೆಯನ್ನು ಇಡಲಿಕ್ಕೆ ಅದಕ್ಕೆ ನಾನು ಮೊದಲು ಗುರುವನ್ನು ನಾನು ಆಶಿಸುತ್ತೇನೆ.

ಅಕ್ಕಮಹಾದೇವಿಯವರು ಗುರುವಿಗೆ ಒಂದು ವಿಶೇಷಣವನ್ನು ಕೊಡುತ್ತಾರೆ. ಸದಮಲ ಗುರುವಿನ, ಸದಮಲ ಎಂದರೆ.?ಮನಸ್ಸು ಸ್ವರೂಪದಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಿದವನ್ನು ಮನುಷ್ಯನಿಗೆ ಮೂರು ಮಲತ್ರಯಗಳು ಅಂತ ಹೇಳಿ ನಮ್ಮನ್ನು ಕಾಡುತ್ತವೆ.

ಮೊದಲನೆಯದು ಆಣವ ಮಲ,ಎರಡನೆಯದು ಮಾಯಾ ಮಲ,ಮೂರನೆಯದು ಕರ್ಮಮಲ, ಈ ವ್ಯವಸ್ಥೆಯನ್ನು ನಾವು ನೋಡುತ್ತೇವೆ. ಆಣವ ಮಾಯಾ ಕರ್ಮ ಅನ್ನುವ ಮಾತನ್ನು ಹೇಳುತ್ತೇವೆ.ಅಣವ ಮಲ ಅನ್ನುವಂತದ್ದು ಅಜ್ಞಾನದ ನೆಲೆಯಲ್ಲಿ ಮೂಡಿ ಬರುತ್ತದೆ ಅದು ಬೇರೆ ಇದು ಬೇರೆ ನಾನು ಸಣ್ಣವ ಅವನು ದೊಡ್ಡವ ಬೇದ ಭಾವಗಳಲ್ಲಿ ನಮ್ಮನ್ನು ಸಂಪೂರ್ಣವಾಗಿ ಆವರಿಸಿ ನಮ್ಮ ಶಕ್ತಿ ನಮಗೆ ಅರಿವಾಗದಂತೆ.

ನಮ್ಮನ್ನು ಕುಬ್ಜವನ್ನಾಗಿ ಮಾಡುವಂತಹದ್ದು. ಇದು ಆಣವ ಮಲ ಸೂಕ್ಷ್ಮವಾಗಿ ಹೇಳುವುದಾದರೆ ಆಣವ ಮಲ ಅದೇನು ಮಾಡುತ್ತದೆ ಅಂದರೆ ಆಣವ ಮಲಕ್ಕೆ ಕಾರಣಯಾವುದು ಎಂದರೆ ನಮ್ಮ ಅಜ್ಞಾನ ಎಂಬ ಮಾಯತಿಮೀರ ಸೂರ್ಯ ಎಷ್ಟೇ ಪ್ರಕಾಶ ಶಾಲಿಯಾಗಿದ್ದರೂ ಸಹ ಮೋಡ ಕವಿದಾಗ ಸೂರ್ಯ ಅದರ ಬೆನ್ನ ಹಿಂದೆ ಕಣ್ಮರೆಯಾಗುತ್ತಾನೆ. ಸೂರ್ಯ ಇರುವುದಿಲ್ಲ ಅಂತ ಅಲ್ಲ.

ಆ ಮೋಡಗಳು ಸೂರ್ಯನ ಬೆಳಕಿನಿಂದ ನಮ್ಮನ್ನು ದೂರ ಇಡುತ್ತವೆ. ಹಾಗೆ ನಮ್ಮಲ್ಲಿರುವಂತಹ.ಮಾಯಾನೆಲೆ ನಾನು ನನ್ನದು ಅನ್ನುವಂತದ್ದು, ಆಲೋಚನೆಗಳು, ಅಜ್ಞಾನದ ವಿಶಿಷ್ಟವಾದ ಆಲೊಚನೆಗಳು ಇವೆಲ್ಲ ಸೇರಿದಾಗ ಏನಾಗುತ್ತದೆ ಅಂದರೆ ಆ ಮಾಯೆ ನಮ್ಮನ್ನು ದೂರ ಇಡುತ್ತದೆ. ಇದನ್ನು ವಿಶೇಷವಾಗಿ ನಾವು ಗಮನಿಸಬೇಕು. ಈ ಮಾಯೆ ಅನ್ನುವಂತದ್ದು ನಮ್ಮ ವ್ಯಾಮೋಹ ನಮ್ಮ ಸೆಳೆತ ಇವನ್ನೆಲ್ಲ ನಾವು ನೋಡುತ್ತಾ ಹೋಗುತ್ತೇವೆ.

ಬಿಟ್ಟೆನೆಂದರೆ ಬಿಡದೀ ಮಾಯೆ ಬಿದ್ದರೆ ಬೆಂಬತ್ತಿತು. ಮಾಯೆ ಅಕ್ಕಮಹಾದೇವಿ ತಾಯಿಯವರು ವಚನದಲ್ಲಿ ಹೇಳುತ್ತಾರೆ. ಅಂದರೆ ಮಾಯೇ ಅನ್ನುವಂತದ್ದು ನಮ್ಮ ವ್ಯಾಮೋಹ ಮತ್ತು ಲೌಕಿಕವಾಗಿ ಇರುವಂತಹ ನೆಲೆ. ಅದನ್ನು ನಾವು ಹೊರಗಡೆ ಬಿಡಿಸಿಕೊಂಡು ನಾವು ಹೊರಗಡೆ ಬರಬೇಕು. ಮಾಯೇಯನ್ನು ನಾವು ಕಳೆಯಬೇಕು. ಆಣವ ಮಾಯ ಇದರ ಜೊತೆಯಲ್ಲಿಯೇ ಕರ್ಮಮಲ ಇದೆಯಲ್ಲ.ನಾವು ಸಾಧನೆ ಮಾಡದೇ ನಾವು ಎಲ್ಲವನ್ನು ಪಡೆಯಬೇಕು.ಮಾಡುವ ಸಾಧನೆ ಏನು ಇರಬೇಕು, ಅದನ್ನು ಬಿಟ್ಟು ಎಲ್ಲವನ್ನು ಮಾಡುವ ಆಲೋಚನೆಗಳು ಈ ಎಲ್ಲ ವ್ಯವಸ್ಥೆಗಳನ್ನು ಈ ಮಲಗಳಿಂದ ದೂರ ಇದ್ದವರು ಯಾರು ಇದ್ದಾರೆ ಅವರನ್ನು ಸದಮಲ ಗುರು ಅನ್ನುವಂತ ಮಾತು ಅಂದರೆ ಯಾವುದೇ ಮಾಲದಿಂದ.

ವ್ಯಾಪ್ತಿಯ ನಾಗದಂತೆ ಇರುವಂತ ಗುರು ಆತನ ಮೃದು ಪಾದಗಳನ್ನು ಬಲಗೊಂಡು ಮೃದು ಪಾದ ಅಂದರೆ ಗುರುವಿನ ಚರಣ ಅನ್ನುವ ರೀತಿಯಿಂದ ಅರ್ಥ ಸಹಜವಾಗಿ ಮೂಡುತ್ತವೆ. ಆದರೆ ಪಾದ ಎಂದರೆ ಅದು ಗುರುಗಳ ಉಪದೇಶದ ಮೊದಲನೇ ಭಾಗ ಮೊದಲನೇ ಭಾಗ ಯಾವುದನ್ನು ನಾವು ನಾಲ್ಕು ಪಾದ ಅಂತ ಹೇಳುತ್ತೇವೆ. ನಾಲ್ಕು ಚರಣ ಅಂತ ಹೇಳುತ್ತೇವೆ ಚರಣ ಪಾದನ್ನುವುದಕ್ಕೆ ವಿಶೇಷವಾದಂತಹ ಅರ್ಥ ಇದೆ.ಅದನ್ನು ಯಾವುದೇ ಲೆಕ್ಕದಲ್ಲಿ ನೀವು ತೆಗೆದುಕೊಳ್ಳಿ.

ಚರಣ ಅಂತ ಹೇಳಿ ಅಥವಾ ಪಾದ ಅಂತ ಹೇಳಿ ಕಾಲು ಅಂತ ಹೇಳಿ ಕಾಲು ಭಾಗ ಅರ್ಧ ಭಾಗ ಮುಕ್ಕಾಲು ಭಾಗ ಪೂರ್ಣ ಅನ್ನುವಂತ ನೆಲೆಯಲ್ಲೇ ನಾಲ್ಕನೇ ಒಂದು ಭಾಗ ಏನು ಇದೆಯಲ್ಲ? ಇದು ಪಾದ ಮೃದು ಪಾದ ಅಂತ ಯಾಕೆ ಹೇಳಿದ್ದಾರೆ ಅಂದರೆ ನಮ್ಮನ್ನು ಸರಿದಾರಿಗೆ ತರುವುದಕ್ಕೋಸ್ಕರ ಸಹಜವಾದ ರೀತಿಯಲ್ಲಿ ನಮ್ಮ ಮನಸ್ಸಿಗೆ

ಸಾಂತ್ವನವನ್ನು ನೀಡಿ ನಮ್ಮಲ್ಲೇ ಅದ್ಭುತವಾಗಿ ಆತ್ಮವಿಶ್ವಾಸವನ್ನು ಮೂಡಿಸುವ ನೆಲೆ ಇದೆಯಲ್ಲ.

ಇದು ವೃದುಪಾದ ಇದನ್ನು ಬಲಗೊಂಡು ಅಂತ ಹೇಳಿದ್ದಾರೆ. ಇದನ್ನ ನಮ್ಮ ಆಚರಣೆಯಲ್ಲಿ ತಂದುಕೊಂಡು ಆ ಗುರುಗಳ ಉಪದೇಶ ಕೇಳಿ ಮರೆಯುವುದಲ್ಲ. ಅದರಂತೆ ನಾವು ನಡೆಯಬೇಕಾದದ್ದು ಅದರಿಂದ ಈ ತತ್ವದ ಚತುರ ಪದಗಳು ಬಹಳ ವಿಶೇಷವಾದ ರೀತಿಯಲ್ಲಿ ಇಲ್ಲಿ ಗುರು ಅನ್ನುವಂತ ಸತ್ವವನ್ನು ಕುರಿತು ವಿಶೇಷವಾಗಿ ಗುರುವಿಗೆ ಸಂಪೂರ್ಣವಾಗಿ ಸಮರ್ಪಣಾ ಮನೋಭಾವದಿಂದ ಅಂದರೆ ಆಗುರು ಏನು ಮಾಡುತ್ತಾನೆ ಎಂದು ಹೇಳಿದರೆ ನಮ್ಮ ಸಾಧನೆಯಲ್ಲಿ ಎತ್ತರಗಳನ್ನು ಅರಿತು ಸಹಜವಾದ ರೀತಿಯಲ್ಲಿ ಮೃದುವಾಗಿ ಅವರು ಮಾರ್ಗದರ್ಶನ ಮಾಡುತ್ತಾ ಹೋಗುತ್ತಾರೆ. ಆ ನೆಲೆಯಲ್ಲಿ ನಾನು ಹೋಗುತ್ತಾ ಇದ್ದೇನೆ. ಆ ಗುರು ಉಪದೇಶ ಕಾಲು ಭಾಗವನ್ನು ನನ್ನ ಸಾಧನೆಯಲ್ಲಿ ಪೂರ್ಣ ಮಾಡಿಕೊಳ್ಳುವುದಕ್ಕೋಸ್ಕರ ನಾನು ಹೆಚ್ಚು ಇಡುತ್ತಿದ್ದೇನೆ.

ಗುರುಗಳಿಂದ ಕಲಿಯುವುದು ಕಾಲುಭಾಗ ಇನ್ನು.ಕಾಲು ಭಾಗ ತನ್ನ ಸಾಧನೆಯಿಂದ ಇನ್ನು ಕಾಲು ಭಾಗ ಶರಣರ ಜೊತೆಯಲ್ಲಿ ಇನ್ನು ಕಾಲು ಭಾಗ ಅನುಸಂಧಾನ ಮಾಡಿ ಅವರಿಂದ ಪಡೆಯುವಂತದ್ದು.ನಂತರ ತನ್ನ ಸಾಧನೆಯಲ್ಲಿ ಪರಿಪೂರ್ಣ ಹೊಂದುತಾನೆ ಈ ನಾಲ್ಕು ಸಾಧನೆಯ ಅಂತದಲ್ಲೇ ಒಂದೊಂದು ಪಾದ ಅನ್ನುವ ಲೆಕ್ಕದಲ್ಲಿ ಹೇಳಿದ್ದಾರೆ  ಅಕ್ಕನವರು ಅದನ್ನು.ಲೌಕಿಕವಾದಂತ ರೀತಿಯಲ್ಲೇ ಅದನ್ನು ಬೇರೆ ರೀತಿಯಲ್ಲಿ ಬಳಸುತ್ತೇವೆ.

3) ಜೀವ ಪರಮರ ಭೇದಭಾವವನ್ನು ಅರಿವಡೆ
ಆವಾವ ಮುಖದೊಳಿರುತಿಹುದೊ | ಎನ್ನ ಅನು
ಭಾವಕ್ಕೆ ಬಂದುದೊರೆವನು.

ಜೀವಾಆತ್ಮ ಪರಮಾತ್ಮ ಅನ್ನುವ ಸಾಕಷ್ಟು ಚರ್ಚೆಗಳು, ವಿಚಾರಗಳು, ಗ್ರಂಥಗಳು ಇನ್ನು ವಾದ ವಿವಾದಗಳು ಇವೆಲ್ಲ ನಡೆದಿರುವುದನ್ನು ನಾವು ನೋಡಿದ್ದೇವೆ.ಜೀವಪರ ಮರ ಬೇದ ಭಾವ ಯಾವುದು, ಯಾವುದು ಬೇಧ ಯಾವುದು ಅ ಅಬೇಧ? ಇದನ್ನು ವಾಸ್ತವವಾಗಿ ತಿಳಿದುಕೊಳ್ಳಬೇಕು. ಇದನ್ನು ಯಾವ ಯಾವ ರೀತಿಯಲ್ಲಿ ನಾವು ನೋಡ ಬೇಕು ಜೀವಾತ್ಮ, ಪರಮಾತ್ಮ, ಪೂಜ್ಯ ಪೂಜಕ ಈ ಎರಡು ವಾಸ್ತವಗಳನ್ನು ಇಟ್ಟುಕೊಂಡು ಯೋಚನೆ ಮಾಡಿದರು.

ಜೀವಾತ್ಮ ಪರಮಾತ್ಮ ಅವನು ಅವನೇ ನಾನು ನಾನೆ ದ್ವೈತವಾಯಿತು, ಸಾಧನೆ ಮಾಡುತ್ತೇನೆ, ಜೀವಾತ್ಮ, ಪರಮಾತ್ಮ ಅಂದರೆ ನಾನು ಸ್ವಲ್ಪ ಅವನಂಗ್ಗೆ.ನಾನು ಆಗಬಹುದು ಅನ್ನುವುದು ವಿಶಿಷ್ಟಾದ್ವೈತವಾಯಿತು. ಇಲ್ಲ, ಇಲ್ಲ ಬೇರೆ ಅಲ್ಲ, ನಾವು ಎಲ್ಲಾ ಒಂದೇ ಅನ್ನುವುದು ಅದ್ವೈತವಾಯಿತು. ಸಾಧನೆಯ ನೆಲೆಯಲ್ಲಿ ಮೂರನ್ನು ಗಮನಿಸಬಹುದು.ಇವೆಲ್ಲವೂ ಒಂದೇ ಒಂದೇ ವಿವಿಧ ರೂಪದಲ್ಲಿ ಕಾಣುತ್ತವೆ.

ಜೀವಾತ್ಮ, ಪರಮಾತ್ಮ ಎಲ್ಲಿಯವರೆಗೆ ನಮ್ಮೊಳಗೆ ಇರುವಂಥ ಚೈತನ್ಯ ಇದೆ. ಅದನ್ನು ಜೀವ ಅಂತ ಕರೆಯುತ್ತೇವೆ.
ನಮ್ಮ ಎದುರಿನಲ್ಲಿ ಇನ್ನೊಂದು ಜೀವ ಕಾಣುತ್ತದೆ. ಅದರಲ್ಲಿ ಚೈತನ್ಯ ಜೀವ ವ್ಯವಸ್ಥೆ ಇದೆ.ಇವೆಲ್ಲವನ್ನು ನೋಡಿದಾಗ ಪ್ರಕೃತಿ ಪ್ರಪಂಚ ಇವನ್ನೆಲ್ಲ ಸೃಷ್ಟಿ ಮಾಡಿರೋ ವಿಧಾನಗಳನ್ನು ನೋಡಿದಾಗ ಅಬ್ಬಾ. ಎಂಥ ಸೃಷ್ಟಿ ಇವೆಲ್ಲವಕ್ಕೂ ಮೀರಿದ ಇನ್ನೊಂದು ಪರಮ ಶಕ್ತಿ ಒಂದು ಇದೆ ಅನ್ನುವ ಅನುಭವಕ್ಕೆ ಬರುತ್ತದೆ. ಆ ಅನುಭವ ಬಂದಾಗ ಯಾವ ರೀತಿಯಾಗಿ ಯೋಚನೆ ಮಾಡಬೇಕು, ಯಾವ ರೀತಿಯಲ್ಲಿ ಅಲ್ಲಿ ಅರ್ಥ ಬರಬೇಕು.ಅಕ್ಕಮಹಾದೇವಿ ತಾಯಿಯವರು ಒಂದು ವಚನವಿದೆ. ಅಯ್ಯ ಪಾತಾಳವಿತ್ತಿತ್ತ  ಶ್ರೀಪಾದಂಗಳತ್ತತ್ತ ದಶದಿಕ್ಕು ಇತ್ತಿತ್ತ ದಶಭುಜಂಗಳತ್ತತ್ತ

ಬ್ರಹ್ಮಾಂಡವಿತ್ತಿತ್ತ ಮಣಿಮುಕುಟವತ್ತತ ಚೆನ್ನಮಲ್ಲಿಕಾರ್ಜುನಯ್ಯಾ ನೀವೆನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಲ್ಲಾ ಲಿಂಗವೇ.

ಪರಮಾತ್ಮನನ್ನು ಮೀರಿ ಯಾರು ಇಲ್ಲ. ಪರಮಾತ್ಮನು ಎಲ್ಲ ಕಡೆ ವ್ಯಾಪಿಸಿದ್ದಾನೆ ಎಂದು ಹೇಳಿ ಇದನ್ನೇ ಅಕ್ಕಮಹಾದೇವಿಯವರು ತಮ್ಮ ವಚನದಲ್ಲಿ ಪ್ರಸ್ತಾಪಿಸಿದ್ದಾರೆ.ಅಯ್ಯಾ ಪಾತಾಳವಿತ್ತಿತ್ತ ಶ್ರೀ ಪಾದವತ್ತತ್ತ. ನಿನ್ನ ಪಾದಗಳು ಪಾತಾಳವನ್ನು ಮೀರಿ ಇವೆ. ಇವು ವಿಷ್ಣುವಿಗೂ ದರ್ಶನಕ್ಕೆ ಲಭ್ಯವಾಗಲಿಲ್ಲ. ಬ್ರಹ್ಮಾಂಡವಿತ್ತಿತ್ತ ಮಣಿ ಮಕುಟವತ್ತತ್ತ. ಸೃಷ್ಟಿಕರ್ತನಾದ ಬ್ರಹ್ಮನಿಗೂ ಬ್ರಹ್ಮಾಂಡ ದಾಟಿ ಇರುವ ನಿನ್ನ ರುದ್ರಾಕ್ಷಿ ಸಹಿತವಾದ ಮಸ್ತಕವು ಅಗೋಚರವಾಗಿಯೇ ಉಳಿಯಿತು. ಬ್ರಹ್ಮಾಂಡ ಇತ್ತಲೇ ಇದೆ. ನಿನ್ನ ಮಣಿ ಮುಕುಟವು ಅದನ್ನು ಮೀರಿ ಇದೆ. ಮಣಿ ಎಂದರೆ ರುದ್ರಾಕ್ಷಿ ಸಹಿತವಾದ ಜಟೆ. ಇದು ಬ್ರಹ್ಮನಿಗೆ ದರ್ಶನವಾಗಲಿಲ್ಲ. ಅಯ್ಯಾ ದಶದಿಕ್ಕು ಇತ್ತಿತ್ತ ದಶಭುಜಂಗಳತ್ತು. ಎಲ್ಲ ಹತ್ತು ದಿಕ್ಕುಗಳು ಇತ್ತಲೇ ಇವೆ. ಪರಮಾತ್ಮ ನೀನು ದಿಕ್ಕುಗಳನ್ನು ದಾಟಿ ಇರುವೆ. ಇಂತಹ ಪರಮಾತ್ಮನೇ, ನಿನ್ನ ಪ್ರತಿರೂಪವೇ ಇಷ್ಟಲಿಂಗದ ಚುಳುಕಾಗಿ ನನ್ನ ಕರಸ್ಥಲದಲ್ಲಿರುವೆ. ನೀನು ನನಗೆ ದರ್ಶನ ನೀಡು ಎಂಬ ಭಕ್ತಿಯ ಪ್ರಾರ್ಥನೆ ಈ ವಚನದಲ್ಲಿದೆ.

ನಾವು ಒಂದು ಆಲೋಚನೆ ಮಾಡುತ್ತೇವೆ.ಜಗತ್ತಿನ ಆದಿಯಲ್ಲಿ ನಮಗೆ ಕಾಣುವಂತದ್ದು ಆಕಾಶ. ಈ ಜಗತ್ತು ಬಹಳ ದೊಡ್ಡದು. ಅದಕ್ಕಿಂತ ದೊಡ್ಡದು ಮೇಲಿನ ಆಕಾಶ ಅದಕ್ಕೂ ಮೀರಿದ್ದು ಏನು?ಎರಡರ ಆದಿಯನ್ನು ಸಂಪೂರ್ಣವಾಗಿ ಮರೆತು ಸೇರುವಂತ ನೆಲೆ ಯಾವುದು ಅದನ್ನು ತಲುಪುವ ಆದಿ ಏನು ಅನ್ನುವ ಅಕ್ಕಮಹಾದೇವಿ ತಾಯಿಯವರು.ನಮ್ಮ ಮುಂದೆ ಈ ಪ್ರಶ್ನೆ ನಮ್ಮೆಲ್ಲರ ತಲೆಯಲ್ಲಿ ಓಡಾಡುವಂತೆ ಪ್ರಶ್ನೆಯನ್ನು ತೆಗೆದಿಟ್ಟಿದ್ದಾರೆ ಅಕ್ಕನವರು ,ಬಹಳ ವಿಶಿಷ್ಟವಾದ ರೀತಿಯಲ್ಲಿ ನೋಡಬೇಕು. ಈ ಭೇದಭಾವ ಯಾವ ಯಾವ ರೀತಿಯಲ್ಲಿ ಇದೆ?

ಈಗ ನಾವು ಮೊದಲು ಹೋಗುತ್ತೇನೆ. ಅಲ್ಲಿ ಪೂಜ್ಯಪೂಜಕ ಅನ್ನುವ ಭಾವನೆ ಇರುತ್ತದೆ. ನಾನು ಪೂಜೆ ಮಾಡುವ ಇದು ದ್ವೈತ ಪೂಜೆ ಮಾಡುತ್ತಾ ಮಾಡುತ್ತಾ ತಾನು ಕಡಿಮೆ ಆಗುತ್ತೇನೆ ಆ ಭಗವಂತ ಶಕ್ತಿ ಜಾಸ್ತಿ ಆಗುತ್ತದೆ ಅನ್ನುವ ಆಲೋಚನೆ.ಇದು ವಿಶಿಷ್ಟಾದ್ವೈತ. ಈ ಸಾಧನೆಯ ಆದಿಯಲ್ಲಿ ಸಂಪೂರ್ಣವಾಗಿ ಶಿವಯೋಗಾನಂದ ಸಮರದಲ್ಲಿ ಸಂಪೂರ್ಣವಾಗಿ ಸಮರಸ ಭಕ್ತಿಯಲ್ಲಿ ನಿಂತಾಗ ಇದು ಅದ್ವೈತವಾಗುತ್ತದೆ. ಅಕ್ಕಮಹಾದೇವಿ ತಾಯಿಯವರು ಇಲ್ಲಿ ಒಂದು ವಚನ ಹೇಳುತ್ತಾರೆ.

ಚಿಲಿಮಿಲಿ ಎಂದು ಓದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಕೊಳನತಡಿಯೊಳಾಡುವ ಹಂಸೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಗಿರಿ ಗವ್ಹರದೊಳಗಾಡುವ ನವಿಲುಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ.

ಅಕ್ಕಮಹಾದೇವಿಯವರು ಚೆನ್ನಮಲ್ಲಿಕಾರ್ಜುನ ಕಂಡರೆ ತೋರಿರೇ ಅಂತ ಅಂದಾಗ ಅವೆಲ್ಲವೂ ಬೇರೆ ಬೇರೆ ದ್ವೈತದ ನೆಲೆಯಲ್ಲಿ ಏಳುತ್ತವೆ. ವಿಶಿಷ್ಟಾದ್ವೈತದ ನೆಲೆಗೆ ಹೋದಾಗ ಅಕ್ಕನವರು ಅನುಭವ ಜಾಸ್ತಿ ಆದಾಗ ಅಕ್ಕಮಾದೇವಿ ತಾಯಿಯವರು ಏನು ಹೇಳುತ್ತಾರೆ?
ವನವೆಲ್ಲಾ ನೀನೆ, ವನದೊಳಗಣ ದೇವತರುವೆಲ್ಲಾ ನೀನೆ, ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ. ಚೆನ್ನಮಲ್ಲಿಕಾರ್ಜುನಾ, ಸರ್ವಭರಿತನಾಗಿ ಎನಗೇಕೆ ಮುಖದೋರೆ? ಇದು ವಿಶಿಷ್ಟ ಅದ್ವೈತವನ್ನು ಹೇಳುತ್ತದೆ. ತರು ಕಾಣುತ್ತಿದೆ, ಮರ ಕಾಣುತ್ತಿದೆ, ಪಕ್ಷಿಗಳು ಕಾಣುತ್ತವೆ. ಖಗಮೃಗ ಎಲ್ಲ ಕಾಣುತ್ತಾ ಇದೆ. ಎಲ್ಲವನ್ನೂ ಇಟ್ಟುಕೊಂಡು ಅಕ್ಕಮಹಾದೇವಿ ತಾಯಿಯವರು ಹೇಳುತ್ತಾರೆ. ಎಲ್ಲವೂ ನೀನೆ ಇಲ್ಲಿ

ಎರಡಾಗಿ ಕಾಣುತ್ತದೆ. ಆದರೆ ವಾಸ್ತವವಾಗಿ ಅದು ಒಂದೇ ಅನ್ನುವಂತಾಗಿದೆಲ್ಲಿ ಕಂಡುಬರುತ್ತದೆ.ಹಾಗಾದರೆ ದ್ವೈತದ ನೆಲೆಯಲ್ಲಿ ಅಕ್ಕನವರು ಏನು ಹೇಳುತ್ತಾರೆ?

ಲಿಂಗವೆನ್ನೆ ಲಿಂಗೈಕ್ಯವೆನ್ನೆ, ಸಂಗವೆನ್ನೆ ಸಮರಸವೆನ್ನೆ. ಆಯಿತೆನ್ನೆ ಆಗದೆನ್ನೆ, ನೀನೆನ್ನೆ ನಾನೆನ್ನೆ. ಚೆನ್ನಮಲ್ಲಿಕಾರ್ಜುನಯ್ಯಾ, ಲಿಂಗೈಕ್ಯವಾದ ಬಳಿಕ ಏನೂ ಎನ್ನೆ. ಇದು ಅಧೈತದ ಆದಿಯಲ್ಲಿ ಈ ಸಾಧನೆಯಲ್ಲಿ ಒಂದೊಂದು ಅಂತ ನಾವೇನು ಮಾಡುತ್ತೇವೆ. ಒಂದೇ ಹಂತದಲ್ಲಿ ಹಿಡಿದುಕೊಂಡು ಹೊರಗಿನ ಗದ್ದಲ ಗಲಾಟೆಗಳಲ್ಲಿ ನಾವು ಗುದ್ದಾಟ ಮಾಡುತ್ತಾ ಹೋಗುತ್ತೇವೆ. ಪುರಾತನನು ಅದನ್ನು ಅಂತರಂಗದ ಅನುಭವ ನೆಲೆಯಲ್ಲಿ ನಮ್ಮನ್ನು ನಾವು ಹೇಗೆ ತಿಳಿದುಕೊಳ್ಳಬೇಕು ಅನ್ನುವ ಆಲೋಚನೆ ಮಾಡುವುದಿಲ್ಲ.ಇಲ್ಲಿ ತಿಳಿಸುವ ಕಾರ್ಯವನ್ನು ಅಕ್ಕಮಹಾದೇವಿ ತಾಯಿಯವರು ಮಾಡುತ್ತಾ ಇದ್ದಾರೆ ಅನ್ನುವುದನ್ನು ನಾವು ಗಮನಿಸಬೇಕು.

ಇದು ನನ್ನ ಭಾವಕ್ಕೆ ಬಂದುದನ್ನು ಹೊರವೇನು ಅಂತ ಹೇಳಿದ್ದಾರೆ. ಭಾವ ಅದು ಸ್ವಭಾವ, ಆ ಸ್ವಭಾವ ಪರಿಪೂರ್ಣವಾಗಿ ಇರುವಂತಹ ಇನ್ನು ಮೇಲಿನ ನೆಲೆಯಲ್ಲಿ ತಲುಪುವಂತ ವ್ಯವಸ್ಥೆಯಾಗುತ್ತಿದೆ. ಭಾವ ಬೇರೆ.ಅದಕ್ಕೂ ಮೊದಲು ನಮ್ಮಲ್ಲಿ ಇರುವಂತಹ ನಾನೆ ಹೆಚ್ಚು ನಾನೇ ದೊಡ್ಡವ ಅನ್ನುವಂಥ ಭಾವ ಇರುತ್ತದೆ. ಇದಕ್ಕೆ ಮೊದಲು ಅಭಾವ ಇರುತ್ತದೆ. ಅಜ್ಞಾನದ ಕೂಪದಲ್ಲಿ ಏನು ಗೊತ್ತಿಲ್ಲದಂತಹ ವ್ಯವಸ್ಥೆಯಲ್ಲಿ ಇರುತ್ತದೆ.

ಆದರೆ ತನ್ನನ್ನು ತಾನು ತಿಳಿದುಕೊಂಡಾಗ ಅದು ಸ್ವಭಾವ ಆಗುತ್ತದೆ. ಆಮೇಲೆ ಅದು ಏನಾಗುತ್ತದೆ ಅಂದರೆ ಪರಿಪೂರ್ಣ ನೆಲೆಯಲ್ಲಿ ಹೋದಾಗ ಅದು ಮಹಾನುಭವ ನೆಲೆಯಾಗಿ ನಿಲ್ಲುತ್ತದೆ. ಆ ಎತ್ತರಕ್ಕೆ ಏರುವ ಸಾಧನೆಗಳು ಅಕ್ಕಮಹಾದೇವಿಯವರು ಇಲ್ಲಿ ಹೇಳಿದ್ದಾರೆ.

4) ಶರಣರ ನೆಲೆಗಳನರಿವಡೆನ್ನ ಅಳವೆ
ಹರಿಯಜಸುರರಿಗಳವಲ್ಲ | ವೆಂದೆನ
. ಲೊರೆವೆ ನಾನವರ ಕೃಪೆಯಿಂದ

ಈ ಶರಣರ ಆತ್ಮಾನುಸಂಧಾನ ಬೆಲೆ ನೆಲೆ ಇದೆಯಲ್ಲ ಅದನ್ನು ತಿಳಿದುಕೊಳ್ಳುವುದು ಹೇಗೆ ನನಗೆ ಸಾಧ್ಯವೇನು?ಶರಣ ಎನ್ನುವ ಪದ ಬಹಳ ಉನ್ನತವಾದದು.ಬೆಲೆಯೇ ಕಟ್ಟಲಿಕ್ಕೆ ಆಗದು. ಏಕೆಂದರೆ ಶರಣರು ಸಾಮಾನ್ಯರಲ್ಲ. ಒಳ್ಳೆ ಗೌರವ ಘನತೆಯಿಂದ ಕೂಡಿದವರು ಶರಣರು.ದೇವರಿಗೆ ಶರಣಾದವರು ದೇವರಿಗೆ ಶರಣಾದ ಪದ ಶರಣ ಅನ್ನುವ ಪದವಂತದ್ದು. ಭವಕ್ಕೆ ಶರಣಾಗದೆ ಪರಮಾತ್ಮನಿಗೆ ಶರಣಾದವನೇ ಶರಣ ಅಂತ ಶರಣನ ಸ್ಥಿತಿ ಇರುವು ಅದು ಬಹಳ ಆಳವಾದದ್ದು. ಶರಣರ ತತ್ವ, ಶರಣರ ನಿಲುವು, ಶರಣರ ಸ್ಥಾನ ಹೃದಯವನ್ನು ಗೆದ್ದವರು, ಅಕ್ಕಮಹಾದೇವಿಯವರು.ಹರಿಯಜಸುರರಿಗಳವಲ್ಲ | ವೆಂದೆನ,ಲೊರೆವೆ ನಾನವರ ಕೃಪೆಯಿಂದ.

ಆಗಾದರೆ ಇದನ್ನು ತಿಳಿದುಕೊಳ್ಳಬೇಕಾದರೆ ಯಾರಕೃಪೆ ನನಗೆ ಬೇಕು. ಹರಿಯಜಸುರ ಎಲ್ಲರಿಗಿಂತಲೂ ಶ್ರೇಷ್ಠವಾಗಿ ಇರುವಂತವರು ಶರಣರ ಹರಿಯಜಸುರರಿಗಳವಲ್ಲ ಅಂದರೆ ಏನು ಅರ್ಥ? ಹರಿ ಅಜ ಸುರ ಈ ಮೂರನ್ನು ಹೇಳಿದರು ತಾಯಿ ಅದೇನು ಅಂತ ಅಂದರೆ ಸೃಷ್ಟಿ, ಸ್ಥಿತಿ, ಲಯ ನೆಲೆಯಲ್ಲಿ ಆ ಜವಾಬ್ದಾರಿಯನ್ನು ಹೊತ್ತವರು ನಾವು ಯಾರನ್ನು ಗುರುತಿಸುತ್ತೇವೆ ಆಗಿ.ಅವರು ಸೃಷ್ಟಿ ಯ ನೆಲೆಯಲ್ಲಿ ಅರ್ಥವಾಗುವುದಿಲ್ಲ.ಅದನ್ನ ಪಾಲನೆಯಲ್ಲಿ ಅರ್ಥವಾಗುವಂಥದ್ದಲ್ಲ. ಇದನ್ನ ಸಂಪೂರ್ಣವಾಗಿ ಒಳಗೊಳ್ಳುವ ನೆಲೆಯಲ್ಲಿ ಅರ್ಥವಾಗುವಂತದ್ದು ಅಲ್ಲ. ಇದಕ್ಕೆ ಮೀರಿದಂತ ನೆಲೆ ಇದೆ.

ಅದನ್ನೇ ತಿಳಿಯಬೇಕಾದರೆ ಅದು ಶರಣರ ಕೃಪೆಯಿಂದ ಮಾತ್ರ ತಿಳಿಯಲಿಕ್ಕೆ ಸಾಧ್ಯ. ಶರಣರ ನೆಲೆ ಯಾವುದುನ್ನುವಂತ ಅದನ್ನು ಸಹಜವಾದ ರೀತಿಯಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕಾದರೆ ಏನು ಮಾಡಬೇಕು. ಮೊದಲು ನನ್ನ ಅಂತ

ಸಾಕ್ಷಿಯಾದಂತಹ ನನ್ನ ಅಂತರಂಗ ಸಂಪೂರ್ಣವಾದ.ಬೆಳಗಾಗಿ ಇರುವಂತ ನಾನು ಸಾಧನೆಯ ಪಥದಲ್ಲಿ ಸಾಕಾರಗೊಳಿಸಿ ನೋಡುವಂತ ಪರಮಾತ್ಮನು ಆ ಮಹಾಲಿಂಗದ ಪ್ರಭೆ ನನ್ನಿಂದ ನುಡಿಸಬೇಕು.

ಅಕ್ಕನವರು ಇದರಿಂದ ಅರಮನೆಯಿಂದ ಶ್ರೀಶೈಲಕ್ಕೆ ನಡೆದರು. ಅಕ್ಕನವರು ದಾರಿಯುದ್ದಕ್ಕೂ ಶರಣರ ಪರಿಚಯವಾಯಿತು. ಅಪಾರ ಆಸೆಯನ್ನಿಟ್ಟುಕೊಂಡು ಕಲ್ಯಾಣಕ್ಕೆ ಹೋದ ಅಕ್ಕನ ಅವರಿಗಾದ ಆಘಾತ ಅಷ್ಟಿಷ್ಟಲ್ಲ.ಕಾಮುಕ ಶರಣ ಕಿನ್ನರಿ ಬೊಮ್ಮಯ್ಯನಿಗೆ ಸರಿಯಾಗಿ ಬುದ್ದಿ ಕಲಿಸಿದರು. ಅಕ್ಕನವರು ಅನುಭವ ಮಂಟಪದಲ್ಲಿ ಅಕ್ಕನ ಅವರಿಗೆ ಮೇಲಿಂದ ಮೇಲೆ ಪ್ರಶ್ನೆ ಕೇಳಿದರು. ಎಲ್ಲರಿಗೆ ಸರಿಯಾದ ಉತ್ತರ ಕೊಟ್ಟ ಅಕ್ಕನವರುಲ್ಲಿದ್ದ ಆರು ಶರಣರು ಮಾತ್ರಕ್ಕನವರ ಬಗ್ಗೆ ಗೌರವ ಸೂಚಿಸಿದರು. ಬಸವಣ್ಣ, ಚೆನ್ನ ಬಸವಣ್ಣನವರು, ಅಲ್ಲಮಪ್ರಭು, ಮಡಿವಾಳ, ಮಾಚಯ್ಯ, ಸಿದ್ದರಾಮೇಶ್ವರರು, ಇಷ್ಟು ಬಿಟ್ಟರೆ ಅಲ್ಲಿ ಇತರ ಶರಣರ ನಡೆ ನುಡಿ ಕಂಡು ಅಕ್ಕನವರಿಗೆ ಆಕಾಶವೇ ಕೆಳಗೆ ಬಿದ್ದಂತಾಯಿತು.ಇನ್ನು ಈ ಶರಣರ ಸಹವಾಸ ಸಾಕು. ಇನ್ನು ನಾನು ಬದಲಾಗುತ್ತೇನೆ. ಅಕ್ಕಮಹಾದೇವಿಯವರು ಇಲ್ಲಿ ಒಂದು ವಚನವನ್ನು ಗಮನಿಸಬಹುದು ನೀವು.

ಬಸವನ ಭಕ್ತಿ ಕೊಟ್ಟಣದ ಮನೆ ಈ ವಚನವನ್ನು ಓದಿ ನಿಮಗೆ ಅರ್ಥವಾಗುತ್ತದೆ. ಒಂದು, ಎರಡು, ವಾರಗಳ ಕಾಲ ಇದ್ದು ಕಲ್ಯಾಣದಲ್ಲಿ ಅಕ್ಕನವರು ಅಲ್ಲಿಂದ ಶ್ರೀಶೈಲಕ್ಕೆ ಹೋದರು. ಶ್ರೀಶೈಲಕ್ಕೆ ಹೋಗುವ ದಾರಿಯಲ್ಲಿ ಅಲ್ಲಿ ಅಲ್ಲಿ ಇತರ ಶರಣರ ತುಂಬಾ ಪರಿಚಯವಾಯಿತು.ಆಗಿನ ಕಾಲದಲ್ಲಿ ಶ್ರೀಶೈಲದಲ್ಲಿ ತುಂಬಾ ಶರಣರ ವಾಸಸ್ಥಾನವೂ ಆಗಿತ್ತು. ಅಕ್ಕನವರಿಗೆ ಇದು ತುಂಬಾ ಅನುಕೂಲವೇ ಆಗಿತ್ತು.

5) ಎಲ್ಲ ದೇವರ ದೇವ ವಲ್ಲಭನೆ ಗುರುಚೆನ್ನ
ಮಲ್ಲಿಕಾರ್ಜುನನೇ ಮನದೊಳಗೆ |ಇರು ಕಂಡಾ
ಬಲ್ಲಂತೆ ನಿಮ್ಮ ಸ್ತುತಿಸುವೆನು.

ನನ್ನ ಮನದಲ್ಲಿ ಮೂಡುವಂತ ಶಬ್ದ ನನ್ನ ಮಾತಲ್ಲ ನನ್ನ ಕಲ್ಪನೆಯೂ ಅಲ್ಲ ನನ್ನ ಚಿಂತನೆಯಲ್ಲ ನಾನು ಏನು ಅಲ್ಲ ಯಾಕೆ ಅಂತ ಹೇಳಿದರೆ ನನ್ನ ಮನದಲ್ಲಿ ಇರುವಂತಹ ಮಹಾಪ್ರಭೆ ಮಹಾಲಿಂಗದ ಪ್ರಭೆಯನ್ನ.ನಾನು ಚೆನ್ನಮಲ್ಲಿಕಾರ್ಜುನ ಅಂತ ಗುರುತಿಸಿದ್ದೇನೆ. ಅಲ್ಲಿ ಬರುವಂತಹ ಶಬ್ದ ಎಲ್ಲವೂ ನಿನ್ನದೇ. ನೀನು ಹೇಳಿದಂತೆ ನಾನು ಇದನ್ನ ಮಾಡುತ್ತೇನೆ ಅನ್ನುವಂತ ಒಂದು ಲೆಕ್ಕವನ್ನು ಅಕ್ಕಮಹಾದೇವಿಯವರು ಹೇಳಿದರು. ಮುಂದಿನ ಮಾರ್ಗದಲ್ಲಿ ಮಾರ್ಗದರ್ಶನ ಮಾಡುವುದಕ್ಕಾಗಿ ಹೋಗುತ್ತಾರೆ.

ವಾಸ್ತವವಾಗಿ ಇದು ಮಹಾದೇವಿಅಕ್ಕನವರ ತ್ರಿಪದಿ ಅಂತ ಹೇಳುತ್ತೇವೆ. ಆದರೆ ವಾಸ್ತವವಾಗಿ ಮಹಾದೇವಿಅಕ್ಕ ತಾನು ಅಲ್ಲದ ನೆಲೆಯಲ್ಲಿ ಆ ಮಲ್ಲಿಕಾರ್ಜುನ.ಪರಿಪೂರ್ಣವಾಗಿ ಇರುವಂತಹ ಬೆಳಕನ್ನ ತನ್ನಲ್ಲಿ ರೂಪಿಸಿಕೊಂಡು ತಾನು ಇಲ್ಲದೆ ಅದನ್ನು ರೂಪಿಸುವಂತ ವಿಧಾನ ಇದೆಯಲ್ಲ. ಇದು ಅಕ್ಕನ ಮಹಾನ್ ಶಕ್ತಿ ಎರಡು ಅಳಿದು ಕೂಡಿದಂತಹ ಒಂದು ಅದ್ಭುತವಾದ ಸ್ಥಿತಿ.

6) ಆರು ಭೂತಂಗಳಲ್ಲಿ ಆರಾರು ತತ್ವದಲ್ಲಿ
ಪೂರೈಸಿ ಇಪ್ಪ ಘನವನ್ನು | ಮನದಲ್ಲಿ
ಅರಿದು ತಿಳಿದೊಡೆ ಅವಮುಕ್ತ

ಪಂಚಭೂತಗಳ ಶರೀರ ಇದು. ಈ ಶರೀರ ಪೃಥ್ವಿ ಅಪ್ಪು ತೇಜಸ್ಸು ವಾಯು ಆಕಾಶ ಅಂದರೆ ನೆಲ, ನೀರು, ಬೆಂಕಿ, ಗಾಳಿ, ಆಕಾಶ ಮತ್ತು ಆತ್ಮತತ್ವ ಆರು ಭೂತಂಗಳು.ಇದನ್ನು ಹಿಡಿದು ಇಟ್ಟುಕೊಂಡಿದೆ. ಇವುಗಳ ನೆಲೆಯಲ್ಲಿ ಇವುಗಳ ಅಂತರಂಗದಲ್ಲಿ ಇರುವಂತಹ ತತ್ವ ಇದೆಯಲ್ಲ. ಇದನ್ನು ವಿಶೇಷವಾಗಿ ಗಮನಿಸಬೇಕು.

ಶಬ್ದ ಸ್ಪರ್ಶ ರೂಪ ರಸ ಗಂಧ ಅದರಲ್ಲಿ ಇರುವಂತಹ ತತ್ವಗಳು ಪ್ರಸಾದ ಕಾರ್ಯವಾಗಬೇಕಾದರೆ ನೆಲ, ನೀರು, ಬೆಂಕಿ, ಗಾಳಿ ಆಕಾಶ ಇದುಪ್ರಸಾದ ಕಾರ್ಯ ಆಗೋದಿಲ್ಲ. ಅದರಲ್ಲಿ ಈ ತತ್ವಗಳ ಅನುಸಂಧಾನ ಮಾಡಬೇಕು. ಶಬ್ದ ಸ್ಪರ್ಶ ರೂಪ ರಸ ಗಂಧ ಮತ್ತು ಇದರ ಜ್ಞಾನ ಈ ಆರರ ಜೊತೆಯಲ್ಲಿ ಜೋಡಿಸಿ ಪೂರೈಸಿ ಇಪ್ಪ ಘನವನು ಅಂದರೆ.ಆರು ಆರರೊಳಗೆ ಸಮೀಕರಿಸಿದಂತಹ ಚೇತನ ದಾಗಿ ಆಗಿರತಕ್ಕಂತ ಈ ಪ್ರಸಾದಕಾಯವನ್ನು ಮನದಲ್ಲಿ ಅರಿದು ತಿಳಿ ದೊಡೆ ಅವಮುಕ್ತ. ಇದರ ಜವಾಬ್ದಾರಿಯನ್ನು ಇತಿಮಿತಿಗಳನ್ನು ಸಾಧಕ ಬಾಧಕಗಳನ್ನು ಇದರ ಅದ್ಭುತತೆಯನ್ನು ಸಹಜವಾಗಿ ತಿಳಿದ ಮಾತ್ರದಿಂದ ಮಾತ್ರ ಅದನ್ನ ತಿಳಿವಳಿಕೆಯನ್ನುಪಡೆದ ಮಾತ್ರ ಅವನು ಮುಕ್ತನಾಗುವುದಕ್ಕೆ ಸಾಧ್ಯ. ಮುಕ್ತಾಯ ಅಂದರೆ ಅಂತರಂಗ ಬಹಿರಂಗ ಗೊತ್ತಿರಬೇಕು.

ಅದು ಗೊತ್ತಿಲ್ಲದಿದ್ದರೆ ಹೇಗೆ ಮಾಡುವುದೂ, ಅದನ್ನು ಸಾಧನೆ ಮಾಡಿರಬೇಕು.ನಾವು ಆ ಸಾಧನೆಯ ಎತ್ತರಕ್ಕೆ ಹೋಗಲೇಬೇಕು. ನೆಲೆ ಅದರಲ್ಲಿ ಇರುವಂತಹ ಬೇದಗಳೇನು? ಆಕಾಶದಲ್ಲಿ ಇರುವಂತ ಬೇದ ಏನೋ ಶಬ್ದ ಸ್ಪರ್ಶ ರೂಪ ರಸ ಗಂಧ ಎಂದು ಹೇಳುತ್ತೇವೆ.ಈ ನೆಲ ಇದೆಯಲ್ಲ. ಇದರ ಮೂಲ ಗುಣ ಗಂಧ ಇದರಲ್ಲಿ ಶಬ್ದ ಸ್ಪರ್ಶ, ರೂಪ ರಸ ಇವು ಸಹ ಸೇರಿವೆ. ಅಲ್ಲಿಂದ ಮುಂದಕ್ಕೆ ಬಂದರೆ ನೀರಿಗೆ ಬಂದರೆ ಆ ನೀರಿನಲ್ಲಿ ಗಂಧ ಇಲ್ಲ.ನೀರಿನಲ್ಲಿ ವಾಸನೆ ದುರ್ವಾಸನೆನ್ನುವುದು ಭೂಮಿಯ ಅಂಶವಾಗಿರುತ್ತದೆ.

ಇರುವಂತದ್ದು ಶಬ್ದ ಸ್ಪರ್ಶ ರೂಪ ರಸ ಇಷ್ಟು ಮಾತ್ರ. ಅಲ್ಲಿಂದ ಮುಂದಕ್ಕೆ ನಾವು ಬೆಂಕಿಯ ಬಳಿ ಬಂದರೆ ಅಲ್ಲಿ ರಸ ಇಲ್ಲ. ಗಂಧ ಇಲ್ಲ.ಅಲ್ಲಿ ಇರುವಂತದ್ದು ಮೂರು ಶಬ್ದ ಸ್ಪರ್ಶ ರೂಪ ಇಷ್ಟು ಮಾತ್ರ ಇರುತ್ತದೆ. ಅಲ್ಲಿಂದ ಮುಂದಕ್ಕೆ ಬಂದರೆ ವಾಯುವಿನಲ್ಲಿ ಶಬ್ದ ಸ್ಪರ್ಶ ಮಾತ್ರ ಇದೆ. ಅದರಲ್ಲಿ ರೂಪ ರಸ ಗಂಧ ಇಲ್ಲ.ಅಲ್ಲಿಂದ ಐದನೇ ನೆಲೆಗೆ ಬಂದರೆ ಅಲ್ಲಿ ಶಬ್ದ ಮಾತ್ರ ಇದೆ. ಅಲ್ಲಿ ರೂಪ ಸ್ಪರ್ಶ ಗಂಧ.ರಸ ಇವುಗಳ ಸಂಬಂಧ ಇಲ್ಲ ಮೇಲಕ್ಕೆ ಹೋಗುತ್ತಾ ಹೋಗುತ್ತ ಒಂದೊಂದು ಕಡಿಮೆಯಾಗುತ್ತಾ ಹೋಗುತ್ತದೆ. ಇವೆಲ್ಲವನ್ನು ಸೇರಿ ನಾವು ಆತ್ಮತತ್ವ ನೆಲೆಗೆ ಬಂದಾಗ ಏನಾಗುತ್ತದೆ ಎಂದರೆ ಅವು ಯಾವ ಇಲ್ಲದಂತಹ ಅದ್ಭುತವಾದಂತಹ ನಿಶಬ್ದದ ನೆಲೆಯಲ್ಲಿ ನಾವು ನೋಡುತ್ತೇವೆ. ಈ ಶಬ್ದವನ್ನು ಅರಿಯಬೇಕಾದರೆ ಅದರ ಹಿಂದಿನ ನಿಶ್ಯಬ್ದವನ್ನು ತಿಳಿಯಬೇಕು.ಆ ನೆಲೆಯನ್ನು ತಲುಪುವುದು ಇದೆಯಲ್ಲ. ಇದು ಎಷ್ಟು ವಿಶೇಷ ಈ ತತ್ವಗಳನ್ನು, ಭೂತಗಳನ್ನು ಯಾವ ರೀತಿಯಾಗಿ ಅವರಿಸಿದೆ.ಯಾವ ರೀತಿಯಾಗಿ ಅಂತ ಅಂತವಾಗಿ ನಾವು ನೋಡಬೇಕು.

ಈ ತತ್ವವನ್ನು, ಭೂತಗಳನ್ನು ಯಾವ ರೀತಿಯಾಗಿ ಅವರಿಸಿದೆ, ಯಾವ ರೀತಿಯಾಗಿ ಅಂತ ಅಂತವಾಗಿ ನಾವು ನೋಡಬೇಕು. ಇವುಗಳಲ್ಲಿ ಇರುವಂತಹ ಬೇಡಗಳೇನು ಇವುಗಳ ವಿಚಾರವೇನು? ನಾವು ತಿಳಿದುಕೊಂಡು ಆ ದಾರಿಯಲ್ಲಿ ನಾವು ಸಹಜವಾದ ರೀತಿ, ಅವುಗಳ ನೆಲೆ ಬೆಲೆ ಕಲೆ ಸರಿಯಾದ ರೀತಿಯಿಂದ ಉಪಯೋಗಿಸುವಂತಹ ವ್ಯವಸ್ಥೆ ಬಂದಾಗ ಅವನು ಮುಕ್ತನಾಗುವ ಆದಿಯಲ್ಲಿ ನಡೆಯುತ್ತಾನೆ.ಇಷ್ಟೆಲ್ಲ ಆಗಬೇಕಾದರೆ ಅಂತರಂಗ ಸಾಧನೆ.ಅವನ ಪ್ರಯಾಣ ಯಾವ ರೀತಿ ಇರುತ್ತದೆ? ಅಕ್ಕಮಹಾದೇವಿಯವರು ವಾಸ್ತವವಾಗಿ ಹೇಳುವುದಾದರೆ ಒಬ್ಬ ಮಹಾನ್ ಕವಿಯತ್ರಿ ಮಹಾನ್ ಯೋಗ ಸಾಧಕರು ಒಂದು ಅದ್ಭುತವಾದ ರೂಪಕ.ಉದಾಹರಣೆಗಳನ್ನು ಕೊಡುವಂತಹ ವಿಧಾನ ಇದೆಯಲ್ಲ, ಅದು ಮನಸ್ಸಿಗೆ ಅಹ್ಲಾದ ಕಥೆ ಸಹಜವಾಗಿ ತಂದುಕೊಡುತ್ತದೆ. ಅಕ್ಕಮಹಾದೇವಿಯವರ ವಚನ, ತ್ರಿಪದಿಗಳು.

7) ಮಾಘಮಾಸವು ಪೋಗಿ ಮೇಗೆ ಬಂದಿತು ಚೈತ್ರ
ಬೇಗ ಮಾಮರನು ತಳಿರಿತ್ತು | ಅದ ಕಂಡು
ಕೂಗಿ ಕರೆಯಿತ್ತು ಕಳಕಂಠ

ಎಷ್ಟೊಂದು ವಿಶೇಷವಾಗಿ ಇರುವಂತಹ ಒಂದು ಕವನ ಇಲ್ಲಿ ಮೂಡಿಬಂದಿತ್ತು. ಮಾಘಮಾಸ ಹೋಗಿ ಮೇಗೆ ಬಂದಿತು ಚೈತ್ರ. ಈ ಮಾಘ ಮಾಸ ಇದೆಯಲ್ಲ.ಇದು ವಿಪರೀತವಾಗಿ ಇರುವಂತಹದ್ದು. ಮಳೆ, ಗಾಳಿ ಇವುಗಳಿಂದ ಕೋರಿ ಅವುಗಳಿಂದ ಹೊರ ಬರುವಂತಹ ವರ್ಷ ಕಾಲ ಮಾಘ ಮಾಸ ಇದು ಬರಡಾದ ಒಂದು ನೆಲೆ ಬೇಸಿಗೆ ಕಾಲ ಎಲ್ಲ ಸಂಪೂರ್ಣವಾಗಿ ರಣಬಿಸಿಲು. ನಮ್ಮ ಮನಸ್ಸಿನಲ್ಲಿ ನಾನು ಏನು ಆಗಬೇಕು ಅಂತ ಗೊತ್ತಿರಲ್ಲ ನನ್ನ ಅಹಂಕಾರ.ನನ್ನ ಮಮಕಾರಗಳು ಅಗ್ನಿಯಾಗಿನ್ನು ಸುಡುತ್ತಿದೆ. ನನಗೆ ಏನು ಅಂತ ಗೊತ್ತಿಲ್ಲ. ದಿಕ್ಕುತಪ್ಪಿದಂತ ಒಂದು ವ್ಯವಸ್ಥೆಯ ನೆಲೆಯಲ್ಲಿ ನಿಂತಂತಹ ಜೀವಾತ್ಮ ಈ ಎಲ್ಲ ಕತ್ತಲೆಯನ್ನ ಕಳೆದುಕೊಂಡು ಮುಂದೆ ವಸಂತ ಕಾಲಕ್ಕೆ ಹೆಜ್ಜೆಯನ್ನು ಇಡುತ್ತರೆ ಅವರಿಗೆ ಮಾರ್ಗ ಗೊತ್ತಾಗಿದೆ.

ಗುರುಗಳ ಉಪದೇಶ ಮಾಡಿದ್ದಾರೆ. ಸಾಧನೆಯ ಪಥದಲ್ಲಿ ಹೇಗೆ ಹೋಗಬೇಕು ಅನ್ನುವುದು ಗೊತ್ತಿದೆ. ತನ್ನ ಶರೀರವೆಂಬ ಪ್ರಸಾದಕಾಯ ಅದನ್ನ ಹೇಗೆ ಸಮೀಕರಣಗೊಳಿ ಸಬೇಕು, ಅನ್ನುವ ವಿಚಾರಗಳು ಗೊತ್ತಿವೆ.ಸಾಧಕನ ಕಡೆಗೆ ಹೋಗುವಂತಹ ಕತ್ತಲೆಯ ಮೊತ್ತದಲ್ಲಿ ತೊಳಲಾಡುತ್ತಾ ಇದ್ದವರಿಗೆ ಅಲ್ಲೊಂದು ಕಡೆ ದೀಪದ ಕಿರಣದ ಬೆಳಕು ಕಂಡು ಆ ಬೆಳಕಿನ ಕಡೆಗೆ ತಾನು ಹೋಗುವಂತಹ ಗುರಿ ಗಮನಿಸುವ ವ್ಯವಸ್ಥೆ ಇದೆಯಲ್ಲ. ಆ ಸ್ಥಿತಿಯನ್ನ ಇಲ್ಲಿ ಹೇಳುತ್ತಾರೆ.

ಅಕ್ಕಮಹಾದೇವಿ ತಾಯಿಯವರು ಅಜ್ಞಾನದ ಕತ್ತಲೆಯಲ್ಲಿ ದಾರಿ ತಪ್ಪಿದಂತ ವ್ಯಕ್ತಿ ಒಂದು ಬೆಳಕಿನ ಕಿರಣವನ್ನು ಕಂಡು ತನ್ನ ಉತ್ಸಾಹವನ್ನು ಬದ್ಧತೆಯನ್ನ ಸಾಕ್ಷಾತ್ಕಾರಗೊಳಿಸಿಕೊಳ್ಳುವುದಕ್ಕೆ ಆ ಕಡೆ ಹೆಜ್ಜೆ ಇಡುವಾಗ ಇದು ನಿರಾಸೆಯಿಂದ.ಕೂಡಿದಂತಹ ಒಂದು ಮನಸ್ಸು ಆಸೆಯ ಕಡೆಗೆ ಹೋಗುತ್ತದೆ. ನಕಾರಾತ್ಮಕವಾಗಿ ಇರುವಂತಹ ವ್ಯಕ್ತಿ ಸಕಾರಾತ್ಮಕವಾಗಿ ಇರುವಂತ ನೆಲೆಗೆ ಹೋಗುತ್ತಾನೆ. ಅದನ್ನ ಮಾಘಮಾಸ ಪೋಗಿ ಮೇಗೆ ಬಂದಿತು ಚೈತ್ರ ಅನ್ನುವ ಮಾತನ್ನ ಬೇಸಿಗೆಯ ಕಾಲದ ನೆಲೆಯನ್ನು ಕಳೆದುಕೊಂಡು ಮತ್ತೆ ವಸಂತ ಆಗಮನದ ಕಡೆಗೆ ಹೋಗುತ್ತಾರೆ. ವಸಂತದ ಕಡೆಗೆ ಹೋದಾಗ ಏನಾಗುತ್ತದೆ ಸಾಧಿಸಬೇಕು ಎನ್ನುವ ಉತ್ಸಾಹ ಅದು ಉಮ್ಮಳಿಸಿ ಬೆಳೆಯಲಿಕ್ಕೆ ಶುರುವಾಗುತ್ತದೆ. ಅಕ್ಕಮಹಾದೇವಿ ತಾಯಿಯವರು ಎಷ್ಟು ಚಂದವಾಗಿ ಹೇಳಿದ್ದಾರೆ ನೋಡಿ ಬೇಗ ಮಾಮರನು ತಳಿರಿತ್ತು ಈ ಬೇಸಿಗೆಯಲ್ಲಿ.

ಮಾಮರ ಚಿಗುರುವುದಕ್ಕೆ ಶುರುವಾಗುತ್ತದೆ. ವಸಂತಕಾಲ ಬರುವುದಕ್ಕೆ ಮೊದಲು ಎಲ್ಲ ಚಿಗುರು ತನ್ನ ಯಾವುದೇ ಒಂದು ಕಾಡಿನಲ್ಲಿ ಹೊಂಗೆ, ತುಂಗೆ ಯಾವುದೇ ಮರಗಳಾಗಲಿ ಎಲ್ಲವೂ ಸಹ ಯುಗಾದಿಯ ಹೊತ್ತಿಗೆ ಎಲ್ಲವೂ ಹಸಿರಾಗಿ ನಿಲ್ಲುವುದನ್ನು ನೋಡುತ್ತೇವೆ. ಚೈತ್ರಮಾಸ ಬರುವುದಕ್ಕೆ ಮೊದಲು ಈ ಬರುವ ಸಮಯದಲ್ಲಿ ಗಂಟಲು ಗಟ್ಟಿ ನಿರುತ್ಸಾಹ ಕೂಡಿದಂತಹ ಕೋಗಿಲೆಗಳು ಮಾಮರದ ತಳಿನಲ್ಲಿ ಕೂತು ಆ ಚಿಗುರನ್ನು ನೋಡುತ್ತಾ ಆ ಚಿಗುರು ಎಲೆಯನ್ನು ಸವಿಯುತ್ತ ಮನದುಂಬಿ ಹಾಡಲು ಪ್ರಾರಂಭಿಸುತ್ತವೆ.ಸಾಧಕನ ಉತ್ಸಾಹ ಅದು ಕೋಗಿಲೆಯಾಗಿತ್ತು ಅದಕ್ಕೆ.ಬೇಕಾಗುವಂತಹ ಸಂಪನ್ನತೆಯ ವ್ಯವಸ್ಥೆಯನ್ನ ತಾನು ಮಾಡಿದ್ದು ಮಾವಿನ ಮರದ ಚಿಗುರು ಆಗಿತ್ತು. ಆ ದಿಕ್ಕಿನಲ್ಲಿ ದಾರಿ ತೋರಿದ ಚೈತ್ರಮಾಸವಾಯಿತು. ಕಗ್ಗತ್ತಲೆಯ ಕಳೆದು ಬೆಳಕಿನ ಆದಿಯಲ್ಲಿ ಹೋಗುವಂತಹ ಸಂಭ್ರಮ.ಉಲ್ಲಾಸ ಸಡಗರ, ಉತ್ಸಾಹ ಈ ಎಲ್ಲವೂ.ಒಟ್ಟು ಸೇರಿಸಿದಂತಹ ಹತ್ತು ಪುಟಗಳ ವಿಸ್ತಾರವಾಗಿ ಇರುವಂತಹ ಚಿಂತನೆಗಳನ್ನು ಕೇವಲ ಈ ಮೂರು ಸಾಲಿನಲ್ಲಿ ನಾವು ನೋಡುತ್ತೇವೆ. ನೋಡಿ ಅಕ್ಕಮಹಾದೇವಿ ತಾಯಿಯವರು ಮಾಘ ಮಾಸ ಪೋಗಿ ಮೇಗೆ ಬಂದಿತ್ತು. ಚೈತ್ರ ಬೇಗ ಮಾಮರನ್ನು ತಳಿರಿತು. ಅದ ಕಂಡ ಕೂಗಿ ಕರೆಯಿತ್ತು ಕಳಕಂಡ ಎಂಥ ವಿಶಿಷ್ಟವಾದಂತಹ ಉತ್ಸಾಹ ಸಂಭ್ರಮ, ಆತ್ಮ ತೃಪ್ತಿ ಇವೆಲ್ಲವನ್ನೂ ಸಹ.ಅಕ್ಕನವರ ನೆಲೆಯಲ್ಲಿ ಕಂಡು ಸಾಧಕಾ ನಿರಂತರವಾದ ಸಕಾರಾತ್ಮಕವಾಗಿ ಚಿಂತನೆಯನ್ನು ತನ್ನ

ಕಡೆ ಮುಂದುವರೆಯುತ್ತಾರೆ. ಆಗಾದರೆ ಅಕ್ಕನವರು ಏನನ್ನು ಕಾಣುತ್ತಾರೆ? ಎಲ್ಲಿ ತಲುಪುತ್ತಾನೆ ಮುಂದಿನ ಮಾತು ಇದೆಲ್ಲ ಯಾವ ಗಮ್ಯತೆಯನ್ನು ಎಲ್ಲಿ ಪಡೆದು ಎಲ್ಲಿ ನೆಲೆ ನಿಲ್ಲಬೇಕು ಅನ್ನುವ ವಿಚಾರವನ್ನು ಮುಂದಿನ ತ್ರಿಪದಿಯಲ್ಲಿ ಇಷ್ಟು ಅದ್ಭುತವಾಗಿ ಹೇಳಿದ್ದಾರೆ.

8)ಆಕಾಶದೊಳಗಣ ಜ್ಯೋತಿಯ ಪ್ರಭೆ ಬಂದು
ಲೋಕಂಗಳಿಗೆ ಮುಸುಕಲು | ಅದರೊಳಗೆ
ಏಕಾಂಗಿಯಾದಡೆ ಅವಯೋಗಿ

ಆಕಾಶ ದೊಳಗಣ ಜ್ಯೋತಿಯ ಪ್ರಭೆ ಬಂದು ಶಿವಯೋಗ ಸಾಧನೆಯಲ್ಲಿ ಪರಿಪೂರ್ಣವಾಗಿ ಇರುವಂತಹ ವ್ಯವಸ್ಥೆಯಲ್ಲಿ ಹೋದಾಗ ಆಕಾಶ ಒಳಗಣ ಜ್ಯೋತಿಯ ಪ್ರಭೆ ಬಂದು ಆಕಾಶ.ಅಂದರೆ ಪಂಚಭೂತಗಳ ನೆಲೆಯನ್ನ ಮೀರಿದಂತಹ ಶಬ್ದಗಳಲ್ಲಿ ನಿಂಥಂತಹ ಶಬ್ದಾತೀತವಾಗಿ ಇರುವಂತಹ ನೆಲೆ ಪ್ರೋತ್ಸಾಹ ನೀಡುವಂತಹ ಒಂದು ಸ್ಥಿತಿ ನಾವು ಷಟ್ ಚಕ್ರಗಳನ್ನು ಏಡುತ್ತಾ ಹೋಗುತ್ತೇವೆ.

ಈ ತ್ರಿಪದಿಯಲ್ಲಿ ಮುಂದೆ ಬರುತ್ತದೆ. ಆಧಾರ, ಸ್ವಾಧಿಷ್ಠಾನ ಮಣಿಪುರ ಅನಾಹತ ವಿಶುದ್ಧಿ ಆಜ್ಞಾ ಮತ್ತು ಸಹಸ್ರಾರ ಕಮಲ ಅಂತ ಹೇಳುತ್ತೇವೆ.ಈ ಸಹಸ್ರಾರದಳ ಕಮಲ ಇದೆಯಲ್ಲ, ಇದು ಆಕಾಶದ ಒಂದು ಉದಾಹರಣೆ.ಅಲ್ಲಿ ಏನಾಗುತ್ತದೆ ಇದೆ. ಅಂದರೆ ನಮ್ಮ ಇಡೀ ಶರೀರ ಜ್ಯೋತಿರ್ಮಯವಾಗುವಂತಹ ನೆಲೆಯಲ್ಲಿ ಈ ಅಂಗ ಗುಣಗಳನ್ನ ಅಳಿಸಿ ನೋಡಿ. ಅಂಗಕಣಗಳೆಲ್ಲ ಲಿಂಗ ಕಿರಣಗಳಾಗಿ ಬದಲಾವಣೆ ಆಗುವ ನೆಲೆ ಇದೆಯಲ್ಲಾ ಆ ಒಂದು ನೆಲೆಯಲ್ಲಿ ಬಂದಾಗ ಆಕಾಶದೊಳಗಣ ಜ್ಯೋತಿ ನಮ್ಮ ನೆತ್ತಿಯಲ್ಲಿ ಮೂಡಿಬಂದಾಗ ಬ್ರಹ್ಮಾನಂದ ಅದ್ಭುತವಾಗಿ ಇರುವಂತಹ ಬೆಳಕು ನಮ್ಮ ಶರೀರದಲ್ಲಿ ಕಣ ಕಣದಲ್ಲಿಯೂ ಆವರಿಸಿ ನಮ್ಮನ್ನು,ಜ್ಯೋತಿಯನ್ನಾಗಿ ಬದಲಾವಣೆ ಮಾಡುತ್ತದೆ.

ಆಕಾಶದೊಳಗಣ ಜ್ಯೋತಿಯ ಪ್ರಭೆ ಚಿದ್ ಬಿಂದು ಚಿತ್ ಕಾಲ ಪರಿಪೂರ್ಣವಾಗಿ ನೆಲೆನಿಂತಹ ಬೆಳಿಗಿನೊಳಗಣ ಬೆಳಗು ಮಹಾಬೆಳಗು ಆ ಮಹಾಬೆಳಗು ಪರಮಶ್ರಯವೇ ತಾನದ ಒಂದು ಸ್ವತಃ ಸಿದ್ಧವಾದಂತಹ ಈ ಶರೀರವೆಲ್ಲವನ್ನು ಬೆಳಕರಿಸಿ ದಾಗ ಆಕಾಶಗಳ ದೊಳಗಣ ಜ್ಯೋತಿಯ ಪ್ರಭೆಯು ಬಂದು ಲೋಕಗಳಿಗೆ ಮುಸುಕಲು ಲೋಕ ಅನ್ನೋದು ಯಾವುದು, ಲೋಕ ಅಂದರೆ ಅವರಿಗೆ ಇರುವಂತಹದ್ದು ಅಲ್ಲ.ನಮ್ಮೊಳಗೆ ಇರುವಂಥ ಸ್ಥೂಲ ಸೂಕ್ಷ್ಮ ಕಾರಣ ಅನ್ನುವಂತಹ ಈ ಶರಿರತ್ರಯಾ ಇದೆಯಲ್ಲ ಗುಣತ್ರಯ ಇದೆಯಲ್ಲ ಇವೆಲ್ಲವೂ ಲೋಕ ನಾವು ಹೇಳುತ್ತೇವೆ. ಸ್ವರ್ಗಲೋಕ, ಭೂಲೋಕ ಪಾತಾಳಲೋಕ ಅಂತ ಹೇಳುತ್ತೇವೆ.

ಈ ಮೂರು ಅವುಗಳನ್ನೇ ಸ್ಥೂಲ ಸೂಕ್ಷ್ಮ ಕಾರಣ ಸ್ಥೂಲ ಪಾತಾಳದನೆಲೆಯಾದರೆ ,ಸೂಕ್ಷ್ಮ ಅನ್ನೋದು ಮಧ್ಯದನೆಲೆ. ಯಾದರೆ, ದೇವಲೋಕ ಮೇಲಿನ ಲೋಕವಾಗುವಂತಹದ್ದು ಈ ವ್ಯವಸ್ಥೆಯನ್ನ ಸಹಜವಾಗಿ.ಜೋಡಿಸಿದಾಗ ಲೋಕಂಗಳೊಳಗೆ ಈ ಮಹಾನುಭಾವ ಪ್ರವೇ ಬಂದು ಸೇರಿದಾಗ ಅದರ ಪರಿಣಾಮ ಏನಾಗುತ್ತದೆ? ಅಂದರೆ ಜಗತ್ತನ್ನೇ ವ್ಯಾಪಿಸಿರುವಂತಹ ಆಕರ್ಷಣೆ ಒಳಗಾಗುವಂತಹ ಒಂದು ನೆಲೆ ಆಗುತ್ತದೆ

ಆದರೆ ಅಲ್ಲಿ ಏಕಾಂಗಿಯಾದರೆ ಅವ ಯೋಗಿ ಈ ಮಾತು ತುಂಬಾ ವಿಶೇಷವಾಗಿ ತಿಳಿಸಿದ್ದಾರೆ. ಅಕ್ಕಮಹಾದೇವಿಯವರು ಎಲ್ಲರೂ ತನ್ನ ಕಡೆ ನೋಡುವಂಥ ಒಂದು ಅದ್ಭುತವಾದಂತಹ ಒಂದು ಶಕ್ತಿ ಆತನಲ್ಲಿ ಸಂಗ್ರಹವಾಗಿ ಬಿಡುತ್ತದೆ.ನಮ್ಮ ಕಡೆ ಆಕರ್ಷಿತವಾದವರ ಕಡೆ ನಮ್ಮ ಗಮನ ಹೋಗುತ್ತದೆ. ಓಹ್. ನಾನು ಎಲ್ಲರಿಗಿಂತ ಶ್ರೇಷ್ಠ.ನಾನು ದೊಡ್ಡವ. ನಾನು ಸಾಧನೆ ಮಾಡಿದ್ದೇನೆ. ನಾನು ಸಿದ್ಧಪುರುಷ ಆ ನೆಲೆಯಲ್ಲಿ ಏನಾಗುತ್ತದೆ ಎಂದರೆ ತನ್ನ ಸಾಧನೆಯಿಂದ ಭಗ್ನನಾಗಿ ಮತ್ತೆ ಅದಪತನಕ್ಕೆ ಹೋಗುತ್ತಾನೆ ಎಂದು ಹೇಳಿದ್ದಾರೆ. ನಿರ್ಲಿಪ್ತ ನಿಜಅನುಭವ ಸ್ಥಿತಿ ಇರಬೇಕು.

ಉದಾಹರಣೆಗೆ ಬಿಸಿಲಿನಲ್ಲಿ ಒಂದು ಗಾಜಿ ಪಾರದರ್ಶಕವಾಗಿ ಇರುವಂತಹ ಅದರ ನೆರಳು ನಮಗೆ ಕಾಣುವುದಿಲ್ಲ. ಅದು ಬೆಳಕನ್ನು ತಡೆಹಿಡಿಯುವುದಿಲ್ಲ. ಅದೇ ಒಂದು ಅಲ್ಲಿಗೆಯನ್ನ ಅಥವಾ ಅದೇ ಗಾಜಿನ ಹಿಂದೆ ಬಣ್ಣ ಬಳಿದು ನೋಡಿ ಅಲ್ಲಿ ನೆರಳು ಕಾಣುತ್ತದೆ. ನಿಂದಲ್ಲಿ ನೆರಳು. ಪಾರದರ್ಶಕತೆ, ನಾನು ನೀನು ಅನ್ನುವದ್ವಂದ್ವದ ಬಣ್ಣ ಅಚ್ಚಿಲ್ಲ, ಗಾಜೀಗೆ ಹೇನಾಗುತ್ತಾದೆ ಅಂದರೆ ಪಾರದರ್ಶಕವಾದ ನೆಲೆಯನ್ನ ತಲುಪುತ್ತಾದೆ. ಏಕಾಂಗಿಯಾಗಿ ಉಳಿಯುವುದು ಹೇಗೆ ಎಲ್ಲಿ ದ್ವಂದ್ವ ಇಲವೋ ಅಲ್ಲಿ ಏಕಾಂಗಿ ಆತ
ಪೂಜ್ಯ ಪೂಜಕ ಭಾವ ಇಲ್ಲವೊ ಅದು ಏಕಾಂಗಿ ಆಗುವಂತ ಮಾರ್ಗವನ್ನು ಅಕ್ಕಮಹಾದೇವಿಯವರು ಹೇಳಿದ್ದಾರೆ

ಲಿಂಗವೆನ್ನೆ ಲಿಂಗೈಕ್ಯವೆನ್ನೆ ಅಲ್ಲಿ ದ್ವಂದ್ವ ಇಲ್ಲ, ಸಂಗವೆನ್ನೆ ಸಮರಸವೆನ್ನೆ, ಅಲ್ಲಿ ದ್ವಂದ್ವ ಇಲ್ಲ, ಆಯಿತೆನ್ನೆ ಆಗದೆನ್ನೆ, ಸಂಕಲ್ಪಪ,ವಿಕಲ್ಪಗಳು ಇಲ್ಲ, ನೀನೆನ್ನೆ ನಾನೆನ್ನೆ,ಪೂಜ್ಯ ಪೂಜಕ ಬಾವವಿಲ್ಲ ಅಲ್ಲಿ ಇರುವಂತಹ ಏಕಾಂಗಿಯಾದಡೆ ಅವಯೋಗಿ ಆ ನೆಲೆಯಲ್ಲಿ ಬರುವಂತದ್ದು ಎಂಥ ವಿಶಿಷ್ಟವಾದ ಮಾತು ಇದೆ ನೋಡಿ ಈ ಸಾಧನೆಯನ್ನು ಮಾಡಬೇಕಾದರೆ ಈ ಶರೀರ ಯಾವುದಕ್ಕೆ ಈ ಶರಿರವನ್ನು. ಉಪಯೋಗಿಸಿಕೊಳ್ಳಬೇಕು.

9) ಒಂಬತ್ತುವೆಜ್ಜದ ತುಂಬಿದ ಕೊಡನೊಳಗೆ
ಸಂಭ್ರಮದ ಮುತ್ತು ಇರುತಿಹುದು | ಅದರನವ
ನಂಬಿಕೊಂಡವನೆ ಕಡುಜಾಣ

ಈ ಸಂಭ್ರಮದ ಮುತ್ತು ಇರುವುದನ್ನು ಗಮನಿಸಿ ಅದನ್ನು ಯಾರು ನಂಬಿಕೊಂಡು ಅದನ್ನ ಸಾಕ್ಷಾತ್ಕಾರಗೊಳಿಸುತ್ತಾರೆ. ಅವರನ್ನು ಜಾಣ ಎಂದು ಕರೆಯುತ್ತೇವೆ. ಒಂಬತ್ತು ವೆಚ್ಚದ ತುಂಬಿದ ಕೊಡ ನೊಳಗೆ ಈ ಶರೀರದಲ್ಲಿ ಒಂಬತ್ತು ರಂಧ್ರಗಳಿವೆ.ಇವುಗಳಲ್ಲಿ ವಿಶಿಷ್ಟವಾದ ರೀತಿಯಲ್ಲಿ ನಾವು ಅದರ ರುಚಿಯನ್ನ ವ್ಯವಸ್ಥೆಯನ್ನ ತೃಪ್ತಿ. ಇವುಗಳ ನೆಲೆಯಲ್ಲಿ ಈ ಶರೀರವನ್ನು ಇಟ್ಟುಕೊಂಡು ಎಲ್ಲ ವ್ಯವಹಾರ ಮಾಡುತ್ತೇವೆ. ಇದರೊಳಗೆ ಒಂದು ಮತ್ತು ನೀರಿನಲ್ಲಿ ಹೇಗೆ ಒಂದು ಮುತ್ತು.ಆಕಾರವನ್ನು ಪಡೆಯುತ್ತದೆಯೋ ಆಗೆ ಈ ಶರೀರದಲ್ಲಿ ಈ ಅನುಭವ ಮತ್ತು ಜ್ಞಾನ ಅನ್ನುವಂತಹ ನಾದಗಳೆಲ್ಲವೂ ಇಂದುವಾಗಿ ಸಾಕಾರಗೊಳ್ಳುವಂಥ ವ್ಯವಸ್ಥೆ ಮಾಡುತ್ತದೆ ಮುತ್ತು ನೀರಿನಲ್ಲಿ ಹುಟ್ಟುತ್ತದೆ. ಆದರೆ ಅದು ಪರಿಪೂರ್ಣವಾಗಿ ಮುತ್ತದ ಮೇಲೆ ನೀರಿನಲ್ಲಿ ಕರಗುವುದಿಲ್ಲ.
ಇದೇ ರೀತಿಯಲ್ಲಿ ಒಂದು ವಚನ ಅಕ್ಕಮಹಾದೇವಿಯವರು ಇದೆ. ಮುತ್ತು ನೀರಲಾಗಿತ್ತು.ವಾರಿಕಲ್ಲು ನೀರಲ್ಲಾಯಿತು, ಉಪ್ಪು ನೀರಲ್ಲಾಯಿತು ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು, ಮುತ್ತು ಕರಗಿದುದನಾರೂ ಕಂಡವರಿಲ್ಲ. ಈ ಸಂಸಾರಿ ಮಾನವರು ಲಿಂಗ ಮುಟ್ಟಿ ಭವಭಾರಿಗಳಾದರು. ನಾನು ನಿಮ್ಮ ಮುಟ್ಟಿ ಕರಿಗೊಂಡೆನಯ್ಯಾ ಚೆನ್ನಮಲ್ಲಿಕಾರ್ಜುನ. ಮುತ್ತು ನೀರಿನಲ್ಲಿ ಹುಟ್ಟುತ್ತದೆ. ಆದರೆ ಕರಗುವುದಿಲ್ಲ. ಉಪ್ಪು ನೀರಿನಲ್ಲಿ ಕರಗುತ್ತದೆ. ವಾರಿಕಲ್ಲು ಮಂಜುಗಡ್ಡೆ ನೀರಿನಲ್ಲಿ ಕರಗುತ್ತದೆ. ಆಗೆ ನಮ್ಮ ಸಾಧನೆಗೆ ಬೇಕಾಗುವಂತಹ ನಮ್ಮ ಸಂಸ್ಕಾರಗಳು ಮತ್ತು ನೆಲೆ ನಮ್ಮ ಜೀವನ ವಿಶಿಷ್ಟವಾದ ಶಕ್ತಿ.

ಒಂಬತ್ತು ವೆಚ್ಚದ ತುಂಬಿದ ಕೊಡನೊಳಗೆ. ಅದು ಸಂಗ್ರಹವಾಗಿ ಅದು ಗಟ್ಟಿಯಾಗುತ್ತಾ ಬರುತ್ತದೆ. ಸಾಧನೆಯಿಂದ ಅದು ಅದರಲ್ಲಿ ಕರಗುವುದಿಲ್ಲ. ಅದರನವ ನಂಬಿಕೊಂಡವನೆ ಕಂಡು ಜಾಣ ಆ ನೆಲೆಯಲ್ಲಿ ಸಂಗ್ರಹಮಾಡಿ ಅದನ್ನ ಗಟ್ಟಿಗೊಳಿಸಿ ಈ ಶರೀರವೆಂಬ ನಶ್ವರವಾದಂತಹ ಪಾತ್ರೆಯಿಂದ ಮುತ್ತಾಗಿ ಹೋರಹೊಮ್ಮುವಂತೆ ಮಾಡುವರು.ಇದ್ದಾರಲ್ಲ ಅವರನ್ನ ಕಡುಜಾಣ ಅವರು ಏನು

ಸಾಧನೆ ಮಾಡುತ್ತಾರೆ, ಆ ಸಾಧನೆಯ ನೆಲೆ ಏನು ಸ್ತುಲವಾಗಿ ಇರುವಂತಹ ಶರೀರದಲ್ಲಿ ನಾವು ಬಂದೆವು. ಇನ್ನುಮುಂದೆ.

ಅದರ ಅಂತರಂಗದಲ್ಲಿ ನಮ್ಮ ಶ್ರದ್ದೆ, ನಿಷ್ಠೆ, ಅವಧಾನ ಅನುಭವ, ಆನಂದ ಸಮರಸ ಈ ನೆಲೆಯಲ್ಲಿ ಯಾವ ರೀತಿಯಲ್ಲಿ ಪ್ರಯೋಗ ಮಾಡಬೇಕು, ಯಾವ ರೀತಿಯಲ್ಲಿ ಚಿಂತನೆ ಮಾಡಬೇಕು. ಆ ನೆಲೆಯಲ್ಲಿ ಅಕ್ಕಮಹಾದೇವಿ ತಾಯಿಯವರು ಯಾವ ರೀತಿ ಮಾರ್ಗದರ್ಶನ ಮಾಡುತ್ತಾರೆ? ಅವರ ಅನುಭವಗಳೇನು?ಇದು ಕುತೂಹಲಕಾರಿ ಪ್ರಶ್ನೆ. ಮುಂದಿನ ತ್ರಿಪದಿಯಲ್ಲಿ ಇನ್ನು ತಿಳಿದುಕೊಳ್ಳೋಣ.

10) ಅಷ್ಟದಳ ಕಮಲದ ಬಟ್ಟಬಯಲೊಳಗೊಂದು
ಮುಟ್ಟಬಾರದ ಘನವಿಹುದು | ಅದರೊಳಗೆ
ದೃಷ್ಟಿ ಇಟ್ಟವನೆ ನಿಜ ಮುಕ್ತ

ಅಷ್ಟದಳ ಕಮಲ ಅಂತ ಕೇಳಿದರೆ ಹೃದಯ ಸ್ಥಾನ ಇರುವಂತಹ 12 ಕಮಲಗಳು 12 ಎಲೆಗಳು ಅದರಲ್ಲಿ ಎಂಟು ಲೌಕಿಕಮುಖವಾಗಿ ಇದೆ. ಇನ್ನು ನಾಲ್ಕು ಉಧ್ವಮುಖವಾಗಿದೆ. ನಮ್ಮ ಜೀವ ಸಂಚಾರ.ನಮ್ಮ ಆಲೋಚನೆ ವ್ಯವಸ್ಥೆಗಳು ನಮ್ಮಲ್ಲಿ ಇರುವಂತಹ ಜೀವ ತನು ತನ್ನ ಊಧ್ವಗತಿಯನ್ನ ಕಂಡುಕೊಳ್ಳುವುದಕ್ಕೆ ಮೊದಲು ಏನು ಮಾಡುತ್ತಿರುತ್ತದೆ ಎಂದರೆ ಈ ಎಂಟೂ ದಿಕ್ಕಿನಲ್ಲಿ ಎಂಟು ಸ್ಥಳದಲ್ಲಿಯೇ ಓಡಾಡುತ್ತಿರುತ್ತದೆ. ಅಷ್ಟದಳ ಕಮಲದ ಬಟ್ಟಬಯಲೊ ಳಗೊಂದು ಮುಟ್ಟಬಾರದ ಘನವಿಹುದು ದಳಗಳೆಲ್ಲ ವರಮುಖವಾಗಿ ಇರುವಂತಹ ಆದರೆ ಒಳಗಿನ ಮಧ್ಯಭಾಗ ಇದೆಯಲ್ಲ. ಆ ಮಧ್ಯಭಾಗ ಮುಟ್ಟ ಬಾರದ ಘನ ಅಲ್ಲಿ ಶಾಂತ ಇರುತ್ತದೆ.

ಉದಾಹರಣೆಗೆ ಏಳಬೇಕಾದರೆ ಸಮುದ್ರದಿಂದ ಬರುವ ನೆರೆ ತೊರೆಗಳು ಇಷ್ಟು ಅದ್ಭುತ. ಅದರಲ್ಲಿ ಸುನಾಮಿ ಬಂತು ಅಂದರೆ ಊರು ನಗರವನ್ನೆಲ್ಲಾ ಕೊಚ್ಚುವಂತಹ ವಿಪರೀತ ದೈತ್ಯಾಕಾರದ ಅಲೆಗಳು, ಆ ಅಲೆಗಳು ಬರುವ ಸನ್ನಿವೇಶದಲ್ಲಿನ್ನೇ ಸಮುದ್ರದಲ್ಲಿ ಇಪ್ಪತ್ತೈದು ಅಡಿ ಆಳದ ಒಳಗೆ ಹೋಗಿ ಅಲ್ಲಿ ಯಾವ ಅಲೆನು ಇರುವುದಿಲ್ಲ ನಿಶ್ಚಲವಾಗಿರುತ್ತದೆ.ನೀರು ಹೊರಮುಖವಾಗಿ ಎಷ್ಟೇ ಗದ್ದಲ ಇದ್ದರೂ ಸಹ ಒಳಗೆ ಶಾಂತತೆಯನ್ನು ಕಾಪಾಡಿಕೊಳ್ಳುವಂತೆ.

ನಮ್ಮ ನೆಲೆಯನ್ನ ಬಿಡಲಾರದಂಥ ಒಂದು ನೆಲೆ ಇದೆಯಲ್ಲ, ಅದನ್ನು ಗಮನಿಸುವುದು ಯೋಗ ವಾಸ್ತವದಂತಹ ರೀತಿಯಲ್ಲಿ ಹೊರಗಿನ ಗದ್ದಲಗಳಿಂದ ಒಳಗಿನ ವ್ಯವಸ್ಥೆಯನ್ನು ಗಮನಿಸುವುದು ಒಳನೋಟ ಅಂತರ್ಮುಖಿಯಾಗಿ ಇರುವಂತದ್ದು. ಅಂಗ ಗುಣಗಳು ಎಲ್ಲ ಗದ್ದಲಗಳನ್ನ ಬಿಟ್ಟು ಒಳಗಿನ ಲಿಂಗ ಗುಣ ನೆಲೆಯನ್ನ ತಲುಪುವುದು ಇದೆಯಲ್ಲ. ಅದನ್ನು ಇದನ್ನು ಸಮೀಕರಿಸುವುದು ಇದನ್ನು ಯೋಗ ಎಂದು ಕರೆಯುತ್ತಾರೆ.

ಇಲ್ಲಿ ಅಷ್ಟದಳ ಕಮಲದ ಬಟ್ಟ ಬಯಲೊಳಗೆ. ಈ ಎಲ್ಲ ಸುತ್ತಿದಂತಹ ವ್ಯವಸ್ಥೆಯ ಮಧ್ಯದಲ್ಲಿ ಮುಟ್ಟಬಾರದ ಘನವಿಹುದು.ಅದು ಏನು ಇಲ್ಲದ ಮಹಾಘನ ಲಿಂಗ ಆ ನೆಲೆಯಲ್ಲಿ ಅದರೊಳಗೆ ದೃಷ್ಟಿ ಇಟ್ಟವನೆ ನಿಜ ಮುಕ್ತ ಹೊರನೋಟವನ್ನು ಬಿಟ್ಟು ಒಳಗೆ ಹೋಗುವಂತಹ ವ್ಯವಸ್ಥೆಯನ್ನ ಸಾಧನೆಯನ್ನು ಮಾಡುವುದು ಒಳ ನೆಲೆಯನ್ನ ತಲುಪುತ್ತಾರೆ ಅವರು ನಿಜ ಮುಕ್ತ ಯಾಕೆ ಅಂತ ಹೇಳಿದರೆ ಅವರು ಬಹಿರ್ ಮುಖವಾಗಿಲ್ಲ, ಅಂತರಮುಖಿಯಾಗಿದ್ದಾರೆ ಯಾವುದೇ.ನೀವು ಸಾಧನೆ ಮಾಡಿ ಆ ಸಾಧನೆಯಲ್ಲಿ ಬಹಿರ್ಮುಖವಾಗಿ ಇರುವಂತಹ ಚಂಚಲತೆಯನ್ನ ವೈಭವವನ್ನ ಸಕಾರಾತ್ಮಕ ನಕಾರಾತ್ಮಕ ಚಿಂತನೆಗಳನ್ನು ಬಿಟ್ಟು ಅಂತರಮುಖವಾಗಿ ನಮ್ಮ ನೆಲೆಯನ್ನ ಗಟ್ಟಿ ಮಾಡುವುದು ಇದು ಬಹಳ ಮುಖ್ಯ. ನಾವು ಮಾಡುವ ಪ್ರತಿಯೊಂದು ಕ್ರಿಯೆಯಲ್ಲಿಯೂ ಸಹ ನಮ್ಮ ಅಂತರಂಗದಲ್ಲಿ ನಿರ್ಲಿಪ್ತತೆ ಇರಬೇಕು ಎಂದು ಹೇಳಿದ್ದಾರೆ ಅಕ್ಕಮಹಾದೇವಿಯವರು.

11) ಕೋಡಗದ ಒಡಗೂಡಿ ಆಡುವ ನರಿನಾಯಿ
ಗೀಡಾದ ಮನೆಯ ಮುರಿದಿಹೆನು | ಮತ್ತೊಂದು
ಗೂಡಿನೊಳು ನಾನು ಮರೆದೆನು

ಹೊರಗಿನ ಶರೀರದ ನೇಲೆ ಇದೆಯಲ್ಲ. ಈ ಆಲೋಚನೆ ಇದನ್ನ ಬಹಳ ವಿಶಿಷ್ಟವಾದ ರೀತಿಯಲ್ಲಿ ನಾವು ಗಮನಿಸಬೇಕು.ನಮ್ಮ ಮನಸ್ಸು ಕೋತಿ ತರಹ ಯಾವಾಗಲೂ ಸುಮ್ಮನಿರುವುದಿಲ್ಲ. ಮನಸ್ಸು ಇಷ್ಟು ಚಂಚಲ ಅಂದರೆ ಹೇಳುವುದಕ್ಕೆ ಆಗುವುದಿಲ್ಲ. ಮನಸು ಅನ್ನುವಂತಹ ಒಂದು ಕೋತಿ, ಈ ಕೋತಿ ಹೇಳಿದ ಹಾಗೆ ಕೇಳುವುದು.ನಮ್ಮ ಜ್ಞಾನೆದ್ರಿಯಗಳು ಅದರಲ್ಲಿ ಕರ್ಮೇಂದ್ರಿಯಗಳು,

ನಾನು ಜ್ಞಾನೆದ್ರಿಂಯಗಳು ಈ ಕರ್ಮೇಂದ್ರಿಯಗಳು ಇದು ನಾಯಿಯ ಹಾಗೆ ಜ್ಞಾನೇಂದ್ರಿಯಗಳು ಇದು ಸರಿಯದ ಹಾಗೆ ಈ ಎರಡು ಮನಸ್ಸಿನ ಮಾತು ಕೇಳಿಕೊಂಡು ನರಿ ನಾಯಿಗಳು ನಮ್ಮ ಈ ವ್ಯವಸ್ಥೆಯನ್ನ ನಮ್ಮ ಈ ಶರೀರ ಈ ಶರೀರವನ್ನು ಸಂಪೂರ್ಣವಾಗಿ ಆಳುಮಾಡಿ ಇಟ್ಟೆವೆ. ಯಾಕೆ ಅಂದರೆ ಈ ಶರೀರವನ್ನು ಯಾತಕ್ಕೋಸ್ಕರ ಇಟ್ಟುಕೊಂಡಿದ್ದೇವೆ.

ನಾವು ನಮ್ಮ ಸಾಧನೆಗೋಸ್ಕರ ನಮ್ಮ ವ್ಯವಸ್ಥೆಗೋಸ್ಕರ ನಾವು ಇದರಿಂದ ಸುಖಪಡೆಯುವುದಕ್ಕೆ ದೇಹಕ್ಕೆ ಅಲಂಕಾರ ಮಾಡಿ ಮಾಡಿಟ್ಟುಕೊಳ್ಳುವುದು.ಯಾವ ಅದಕ್ಕೋಸ್ಕರ ಈ ಪಂಚೇಂದ್ರಿಯಗಳನ್ನು ಅವುಗಳ ಮುಖಾಂತರವಾಗಿ ನಾವು ಸಂಪೂರ್ಣವಾಗಿ ಅದನ್ನು ಅನುಭವಿಸಬೇಕು. ಶಬ್ದ ಸ್ಪರ್ಶ, ರೂಪ ರಸ ಗಂಧ ಇವುಗಳನ್ನೆಲ್ಲ ಅದರ ಸ್ತುಲ ರೂಪ ಸೂಕ್ಷ್ಮರೂಪಗಳನ್ನು ಎಲ್ಲ ಸ್ವೀಕಾರ ಮಾಡಿ ಅದರ ಮುಖಾಂತರವಾಗಿ ಈ ಶರೀರವನ್ನುವಂತಹ ಮನೆಯನ್ನ ಆಳುತ್ತಿದೆ. ಆಳುಗೇಡವಿ ಅಧ್ವವನಾ ಮಾಡಿ ಇಟ್ಟಿದ್ದೇವೆ.ಕಾರಣ ಏನು ಅಂದರೆ ಈ ನರಿ ನಾಯಿಗಳು ಕೋತಿ ಹೇಳಿದ ಹಾಗೆ ಕೇಳುತ್ತವೆ. ಇದನ್ನ ಏನು ಮಾಡಬೇಕು? ಈ ಮನೆಯನ್ನು ನಾನು ಮುರಿದ್ದಿದ್ದೇನೆ.

ಈ ಮನೆಯ ನೆಲೆಯನ್ನು ನಾನು ಸಂಪೂರ್ಣವಾಗಿ ಬದಲಾಯಿಸಿದ್ದೇನೆ ಎಂದು ಹೇಳಿದ್ದಾರೆ. ಅಕ್ಕಮಹಾದೇವಿಯವರು ಒರಗಣ ಶೃಂಗಾರಕ್ಕೆ ನಾನು ಮನಸೋತಿಲ್ಲ. ಒಳಗಿರುವಂತಹ ಅದ್ವಾನವನ್ನ ಸಂಪೂರ್ಣವಾಗಿ ಪರಿಹಾರ ಮಾಡಿದ್ದೇನೆ.ಆ ನೆಲೆಯಲ್ಲಿ ಶರೀರ ಮತ್ತು ಬುದ್ದಿ ಮನಸ್ಸು ಈ ಕರ್ಮೇಂದ್ರಿಯಗಳು ಅನ್ನುವಂತಹಯನ್ನು ಬಿಟ್ಟು ನನ್ನ ಅನುಸಂದಾನದ ನೆಲೆಯಲ್ಲಿ ನನ್ನ ಒಳಗಿರುವಂತಹ ಸೂಕ್ಷ್ಮ ಶರೀರದಲ್ಲಿ ಇವೆಲ್ಲವುದರಿಂದ ನಿರ್ಲಿಪ್ತವಾಗಿ ನಿಜಾನುಭವದಲ್ಲಿ ನಿಲ್ಲುವ ಕೆಲಸ ನಾನು ಮಾಡಿದ್ದೇನೆ.

ಅಂದರೆ ಯಾವುದೇ ಒಂದು ಯೋಗದ ವ್ಯವಸ್ಥೆಯಲ್ಲಿ ನಾವು ಸಾಧನೆ ಮಾಡಬೇಕಾದರೆ ಆ ಸಾಧನೆಯಲ್ಲಿ ನಾವು ಮಾಡಬೇಕಾದದ್ದು ನಮ್ಮ ಇಂದ್ರಿಯಘಾತವಾಗಿರುವಂತ ನೆಲೆಯನ್ನ ಸಂಪೂರ್ಣವಾಗಿ ಬಿಟ್ಟು ಅದರ ಮುಂದುವರೆದ ಭಾಗವನ್ನು ಇಟ್ಟುಕೊಂಡು ಹೋಗುವಂತದ್ದು. ನಾವು ಹೊರಗೆ ಪೂಜೆ ಮಾಡುತ್ತೇವೆ. ದೇವರಿಗೆ ಅಕ್ಕಮಹಾದೇವಿ ತಾಯಿಯವರು ಹೇಳಿದರು.ನಾವು ಏನೇ ಪೂಜೆ ಮಾಡುತ್ತೇವೆ. ಅದು ಹೊರಗಿನ ಶುದ್ದೀಕರಣಕ್ಕೆ ಅಷ್ಟೇ. ಆದರೆ ಒಳಗೆ ನಾವು ಏನು ಮಾಡಬೇಕು?ಎನ್ನಲ್ಲಿ ಏನುಂಟು ಎಂದು ಅಂತರಂಗದ ತಳಮಳ ವ್ಯವಸ್ಥೆ ಬಂದಾಗ ನಮಗೆ ನಿರ್ಲಿಪ್ತ ನಿಜ ಅನುಭವ ನೆಲೆಯಲ್ಲಿ ಬಂದಾಗ ನಾವು ನಿಲ್ಲಲಿಕ್ಕೆ ಅವಕಾಶವಾಗುತ್ತದೆ. ಅಂತಹ ಒಂದು ವ್ಯವಸ್ಥೆಯನ್ನ ನಾವು ತಲುಪಬೇಕಲ್ಲ. ಆ ನೆಲೆಯಲ್ಲಿ ನಾನು ನಿಲ್ಲುತ್ತೇನೆ.
ಆ ಶಿವಯೋಗದ ಸುಖವನ್ನು ಸಹಜವಾದಂಥ ರೀತಿಯಲ್ಲಿ ಸ್ವೀಕಾರ ಮಾಡಿ ನಾನು ಆ ಒಂದು ನೆಲೆಯಲ್ಲಿ ನಾನು ನನ್ನ ಇರುವನ್ನ ಗಟ್ಟಿ ಮಾಡಿಕೊಂಡು ನಾನು ಮುಂದಿನ ಸಾಧನೆಯಲ್ಲಿ ತೊಡಗುತ್ತೇನೆ.

12) ಒಡಹುಟ್ಟಿದೈವರ  ಒಡನೆ ಶಿರಗಳನರಿದು.
ಮಡದಿಯ ಕರವ ಪಿಡಿದಿಹೆನು | ಮುಂದಣ
ನಡು ಬಟ್ಟೆಯೊಳಗೆ ನಡೆವೆನು.

ತನ್ನ ಜೊತೆಯಲ್ಲಿ ಹುಟ್ಟಿದಂತ ಇದು ಜನಗಳನ್ನ ತಲೆಯನ್ನು ಕತ್ತರಿಸಿ ಹಾಕಿದೆ. ಅಬ್ಬಾ. ಎಂಥ ಕ್ರೂರಿ ಅಲ್ವ ಯೋಚನೆ ಮಾಡಿ ಒಡ ಹುಟ್ಟಿದವರು ಇವರು ಯಾರು? ನಾನು ಯಾವಾಗ ಹುಟ್ಟಿದೆ? ಸಂಸಾರ ಎಲ್ಲಿ ಹುಟ್ಟಿತು? ಅಕ್ಕನವರುಹೇಳುತ್ತಾರೆ, ನಾವು ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು. ನಾನು ಹುಟ್ಟಿದಾಗ ಅದರ ಜೊತೆಯಲ್ಲಿ ಹುಟ್ಟಿದ್ದು ಯಾವುದು ಗೊತ್ತ? ಆ ಒಡ ಹುಟ್ಟಿದ ಇವರು ನಾನು ಅನ್ನುವಂತಹ ಪ್ರಜ್ಞೆ. ನನಗೆ ಒಡಮೂಡಿದ ತಕ್ಷಣ ನನ್ನ ಜೊತೆಯಲ್ಲಿ ಮೂಡಿದವರು ಐದುಜನ ಒಂದು ಅವಿದ್ಯೆ, ಇನ್ನೊಂದು ಅಸ್ಮಿತೆ.ಮೂರನೆಯದು,ರಾಗ, ನಾಲ್ಕನೆಯದು ದ್ವೇಶ.ಐದನೆಯದು ಅಭಿನಿವೇಶ.

ಈ ಐದು.ನನ್ನ ಜೊತೆಯಲ್ಲಿ ಹುಟ್ಟಿದೆ. ನಾನು ಅಂತ ಅನ್ನೋದನ್ನ ತೋರಿಸಿಕೊಳ್ಳಬೇಕಾದ್ರೆ, ಇದು ನನ್ನ ಜೊತೆಲಿ ಇರಲೇಬೇಕು. ಹೋಗಲಿ ಏನಾದ್ರೂ ನಮ್ಮನ್ನು ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವಂತಹ ಸಹಾಯಕರಿಲ್ಲ.ಇದುಕ್ಲೇಷ.ಇದು ಕಾಲಿಗೆ ತೊಡರು ಇದನ್ನ ಮೀರಲಾರದೇ ಇರತಕ್ಕಂತ ನೆಲೆ  ಇವು ಏನು ಮಾಡುತ್ತವೆ ಅಂದ್ರೆ ನೀನು ಹಾರದಹಾಗೆ ನಿನ್ನ ಕಾಲಿಗೆ ಸರಪಳಿ ಹಾಕಿ ರೆಕ್ಕೆಪುಕ್ಕ ತೆರೆದು ನಿನ್ನನ್ನು ಇಲ್ಲೇ ನಿಲ್ಲಿಸುವ ಕೆಲಸ ಮಾಡುತ್ತಿದ್ದೆ. ಅಕ್ಕಮಹಾದೇವಿತಾಯಿಯವರು ಹೀಗೆ ಹೇಳುತ್ತಾರೆ,ನಾನೇನು ಮಾಡಿದೆ ಅಂತ ಹೇಳಿದ್ರೆ ನನ್ನ ಜೊತೆಯಲ್ಲಿ ಹುಟ್ಟಿಬಂದ  ಈ ಐವರ ತಲೆಯನ್ನ ತೆಗೆದು ಹಾಕಿಬಿಟ್ಟೆ. ಅವುಗಳ ಅಸ್ಮಿತೆಯನ್ನೇ ತೆಗೆದುಹಾಕಿದೆ ನಾನು.ಮೊದಲನೆಯದು ಅವಿದ್ಯೆ.ಅದು ಏನು ಮಾಡುತ್ತದೆ? ಸಂಪೂರ್ಣವಾಗಿ ನಮ್ಮನ್ನ ಮಾಯೆಯ.ಕತ್ತಲಿನಲ್ಲಿ ಸಂಪೂರ್ಣವಾಗಿ ತುಳಿದು ಒಳಗಾಗುತ್ತದೆ  ಅವಿದ್ಯೆಎಂದರೆ ಅಜ್ಞಾನ. ಯಾವ ಜ್ಞಾನ ನಮಗೆ.ನಾನು ಮಹಾರಾಜರನ ಮಗ.ನಾನು ಶ್ರೀಮಂತರ ಮಗ. ನಾನು ಹುಟ್ಟಿನಿಂದಲೇ ಬಾಯಲ್ಲಿ ಚಿನ್ನದ ಚಮಚ ಇಟ್ಟುಕೊಂಡು ಬಂದವ.

ಈ ಎಲ್ಲ ಲೆಕ್ಕಾಚಾರಗಳು  ಐಶ್ವರ್ಯ. ನನ್ನದು. ಇದೆಲ್ಲವೂ ನಾನು ಇದಕ್ಕೆ ನಾನೇ ಒಡೆಯ. ಈ ರೀತಿಯಾಗಿ ನಮ್ಮನ್ನ ನಕಾರಾತ್ಮಕವಾದ ನೆಲೆಯಲ್ಲಿ ಸಂಪೂರ್ಣವಾಗಿ ನಿಲ್ಲಿಸಿದೆ ಇದೇ ಸರಿ.ಅವಿದ್ಯೆ ಏನು ಹೇಳುತ್ತೆ?ನಾನೇ ಎಲ್ಲ.ಬೇರೆ ಯಾರು ಇಲ್ಲ. ನಾನು ಮಾಡಿದ್ದೇ ಸರಿ. ಅವಿದ್ಯೆಯಾಗಿ ನಮ್ಮನ್ನ ಮಾಯೆಯ ಬಂಧನದಲ್ಲಿ ಕಟ್ಟಿ ಹಾಕಿ ನಮ್ಮನ್ನ ಇಲ್ಲೇ ಇರುವಂತ ನಮ್ಮ ಐಶ್ವರ್ಯ, ನಮ್ಮ ವ್ಯವಸ್ಥೆ, ನಮ್ಮ ಲೆಕ್ಕಾಚಾರ, ಯೋಜನೆ ಇವುಗಳಲ್ಲಿಯೇ ನಮ್ಮನ್ನು ಸಿಕ್ಕಿಹಾಕಿಕೊಳ್ಳುತ್ತದೆ.ಇದೆ ಅವಿದ್ಯೆ ಮಾಯೆ.ಇದೇನು ಮಾಡುತ್ತದೆ ಅವಿದ್ಯೆ ನಮ್ಮಲ್ಲಿ ಬರುತ್ತಿದ್ದ ಹಾಗೆ ನನ್ನಲ್ಲಿ ಅಸ್ಮಿತೆ ಬರುತ್ತೆ.ಇದನ್ನ ನಾನು ಮಾಡಿದೆ.

ನಾನು ಇದು ನನ್ನ ಅಸ್ಮಿತೆ.ಎಲ್ಲರೂ ನನ್ನನ್ನು ಗೌರವಿಸಬೇಕು. ಇದು ಎರಡನೆಯ ಅಂತ ಎಲ್ಲವೂ ನನ್ನಿಂದ ನಡೀತಾ ಇದೆ. ಇದು ಮೂರನೆಯದು.ಎಲ್ಲವೂ ನನಗೋಸ್ಕರ ನನ್ನ ಅಧೀನದಲ್ಲಿರಬೇಕು. ಇದೆಲ್ಲ ಆಗುತ್ತಿರುವುದು ನನ್ನ ದೆಸೆಯಿಂದ ನಾನೇ ಇದಕ್ಕೆ ಕಾರಣ ಎಲ್ಲ ಗೌರವ ನನಗೆ ಇರಬೇಕು. ಇದರ ಸಂಪೂರ್ಣ ಸಾಧನೆ ಮತ್ತು ಕಾಪಿರೈಟ್ ನನಗೆ ಇರಬೇಕು.ಎಲ್ಲರೂ ಎಲ್ಲಾ ವಿಚಾರಗಳನ್ನ ನನ್ನಲ್ಲಿ ಬಂದು ಕೇಳಬೇಕು. ಈ ನಾನು ಅನ್ನುವಂತಹ ಅವಿದ್ಯೆಯ ನೆಲೆಯನ್ನ ಈ ಏಳು ಅಧ್ವಾನದ ಹಾದಿಯಲ್ಲಿ ಕರಕೊಂಡು ಹೋಗುತ್ತದೆ ಇದು ಅಸ್ಮಿತೆ.

ಅಸ್ಮಿತೆ ನಮ್ಮನ್ನು ಏನು ಮಾಡುತ್ತೆ ಅಂದರೆ ಅದರ ಕಡೆಗೆ ಏಳೆದು ಇಡುತ್ತದೆ. ಈ ಹೊಗಳಿಕೆಗೆ ಕಿವಿಕೊಟ್ಟು ಆನಂದವಾಗಿ ಅದನ್ನು ಕೇಳಿ ಕೇಳಿ ಈ ಅಭಿಮತ ಇದು ಮದ್ದು ಬರಿಸಿಕೊಳ್ಳುವ ಹಾಗೆ ನೆಲೆಯಲ್ಲಿ ಕರಕೊಂಡು ಹೋಗತಕ್ಕಂತ ಒಂದು ಅಪೂರ್ವ ಸೆಳೆತ ಇದೆಯಲ್ಲ ಇದುರಾಗ.ಇದಕ್ಕೆ ಏನಾದರೂ ಸ್ವಲ್ಪ ಅಡ್ಡಿ ಬಂದಾಗ. ಅಸಹನೆ ಸ್ಫೋಟವಾದಾಗ ಬರತಕ್ಕಂತ ಇದೆಯಲ್ಲ. ಇದು ಧ್ವೇಷ. ಇವುಗಳೆಲ್ಲವನ್ನು ನಾವು ಇಟ್ಟು ಕೊಂಡು ಇದನ್ನ ಬಿಡಲಾರದೆ ಇದಕ್ಕೆ ಅಂಟಿಕೊಳ್ಳುವಂತಹ ಅಡಿಕ್ಷನ್ ಇದು ಅಭಿನಿವೇಶ. ಒಬ್ಬ ಮನುಷ್ಯನನ್ನು ಹಾಳು ಮಾಡುವಂತ ಈ ಐದು ನಮ್ಮ ಜೊತೆಯಲ್ಲೇ ಹುಟ್ಟಿಬಂದಿವೆ.ನಮ್ಮ ಜೊತೆಯಲ್ಲಿಯೇ ಇವೆ. ಆದರೆ ಅಕ್ಕ ತನ್ನ ಲಿಂಗಾನುಭವ ಧ್ಯಾನದ ಜ್ಞಾನ ಅರಳುತ್ತಿದೆ. ಅವರು ಯೋಚನೆ ಮಾಡಲು ಎಲ್ಲಿ ಏನು ಎಂಟು? ಓ ಹೋ ಇವೆಲ್ಲವೂ ನನ್ನ ಕಾಲಿಗೆ ತೊಡಕಾಗಿವೆ. ಇವುಗಳನ್ನ ನಿರ್ದಾಕ್ಷಿಣ್ಯವಾಗಿ ಇಲ್ಲವಾಗಿಸಿಕೊಳ್ಳಬೇಕು.

ನಾನು ಎನ್ನುವುದು ಹೋಗಿ ನೀನು ಆಗಬೇಕು. ಆ ನೆಲೆಯಲ್ಲಿ ಪರಿ ಪೂರ್ಣತೆಯ ನೆಲೆಯನ್ನ ತಲುಪುವುದು ಇದೆಯಲ್ಲ. ತಲುಪಿದಾಗ ಏನಾಯ್ತು ಅಂದ್ರೆ ಅವುಗಳನ್ನು ಇಲ್ಲವಾಗಿಸಿದೆ.ಇಲ್ಲವಾಗಿಸಿ ಏನು ಮಾಡಿದೆ? ನನ್ನಗೆ ಸಹಕಾರಿಯಾಗಿ ಬಂದಂತಹ ಜ್ಞಾನಶಕ್ತಿಯಿಂದ ಅನ್ನುವಂತ ನನ್ನ ಮಡದಿಯ ಕರವ ಪಿಡಿದೆ.ಜ್ಞಾನದ ಮೇಲೆ ನೋಡಿ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಇವೆಲ್ಲವೂ ಸಹ.ತನಗೆ ಸಹಕಾರಿಯಾಗಿ ಬಂದಂತಹ ಒಂದು ದಿವ್ಯ ಸಂಸ್ಕಾರಗಳು.ಆ ನೆಲೆಯಲ್ಲಿ.ಮಡದಿಯ ಕರವ ಇಡಿದೆ ಅಂತ ಹೇಳಿದ್ರೆ ಜ್ಞಾನ ಶಕ್ತಿಯ ರೂಪದಲ್ಲಿ.

ನನಗೆ ಇವೆಲ್ಲವೂ ಅಜ್ಞಾನವನ್ನು ಬಗೆಹರಿಸಲಿಕ್ಕೆ ಸಹಾಯ ಮಾಡಿದಂತಹ ಜ್ಞಾನಶಕ್ತಿಯ ಕರವನ್ನು ಪೀಡಿದೆದ. ಮುಂದಣ ನಡು ಬಟ್ಟೆಯೊಳಗೆ ನಡೆದಿದೆ. ನಡು ಬಟ್ಟೆ ಅಂದ್ರೆ ಯಾವುದು?ನೋಡಿ ಯಾವತ್ತು ಸಹ ಎಡ ಬಲ ಎರಡೂ ಇರುತ್ತೆ.ಇವೆರಡು ಏನು ಮಾಡುತ್ತದೆ ಅಂತ ಹೇಳಿದ್ರೆ ಒಂದು ನಮ್ಮ ನಕಾರಾತ್ಮಕವಾದ ನೆಲೆ ಕರ್ಕೊಂಡು ಹೋಗುತ್ತೆ. ಇನ್ನೊಂದು ನಮ್ಮನ್ನ ಸಕಾರಾತ್ಮಕವಾದ ನೆಲೆಯಲ್ಲಿ ಏರುತ್ತಿದೆ. ಎಡ ಬಲವನ್ನ ಬಿಟ್ಟು ಮಾಧ್ಯಮದ ಮಧ್ಯ ದಾರಿಯಲ್ಲಿ ಹೋಗಬೇಕಾದರೆ ಜ್ಞಾನ ನಮ್ಮಕ್ಕೈ ಹಿಡಿಬೇಕು. ಪರಮಾತ್ಮನ ಅಂಶವಾದಂತಹ.ಆತ್ಮ.ಇದು ಪಂಚಭೂತಗಳ ಹೊದಿಕೆಯ ಈ ದೇಹವನ್ನ ದಲ್ಲಿಬಿಟ್ಟಿದೆ. ಪಂಚಭೂತಗಳಿಂದ ಕೂಡಿದಂತಹ ಈ ಶರೀರದ ಒಳಗಡೆ ಆತ್ಮನೆಂಬ ಅಂಶ.ಅವತರಣಿಕೆಯಾಗಿದೆ.ಈ ಪಂಚಮಹಾಭೂತಗಳ ಗುಣವನ್ನು ಅಳವಡಿಸಿಕೊಂಡು.ಬೆಳೆದಂತಹ ಈ ದೇಹ.

ಈ ದೇಹದೊಡನೆ ಹುಟ್ಟಿದಂತಹ ಈ ಪ್ರಪಂಚ ಸುತ್ತಮುತ್ತಲು ಇರುವಂತಹ ಈ ಪ್ರಪಂಚ , ಈಪ್ರಪಂಚ ನಡೆಯಲ್ಲಿ. ಪಂಚ ಜ್ಞಾನೇಂದ್ರಿಯಗಳು ಮೂಲವರಿತು ಅಂದ್ರೆ ಪಂಚ ಜ್ಞಾನೇಂದ್ರಿಯಗಳ ಮೂಲ ಏನು ಗೊತ್ತ ಶಬ್ದ ಸ್ಪರ್ಶ, ರೂಪ ರಸ ಗಂಧ ಇವುಗಳ ಚೇಷ್ಟೆ ಶಬ್ದ ಅಂದ್ರೆ ಕೇಳುವುದು ಕಿವಿಯಿಂದ ಸ್ಪರ್ಶ ಅಂದ್ರೆ ಮುಟ್ಟೋದು ಚರ್ಮದಿಂದ ಮಾಡುತ್ತೀರಿ. ಇದು ನಂತರ ರೂಪ ಕಣ್ಣಿನಿಂದ ನೋಡ್ತಾ ಇರಿ ಚಂದ ನೋಡ್ಬೇಕು ಅನ್ಸುತ್ತೆ ರಸ.ನಾಲಿಗೆ ಒಳಗೆ ಏನೇನೊ ತಿನ್ನಬೇಕು ಅನ್ಸುತ್ತೆ. ಹೀಗೆ ಗಂಧ ವಾಸನೆಯನ್ನು ಗ್ರಹಿಸುವಂತದ್ದು ಪಂಚ ಜ್ಞಾನೇಂದ್ರಿಯಗಳ ಒಂದು ಮೂಲ. ಏನಪ್ಪ ಅಂದ್ರೆ ಈ ಶಬ್ದ ಸ್ಪರ್ಶ ರೂಪ ರಸ ಗಂಧ ಅರಿಯುವಂತಹದ್ದು.ಇವುಗಳು ಚೇಷ್ಟೆ ಈಚೆಗೆ ಒಳಗಾದಂತಹ ಮನುಷ್ಯನಿಗೆ ಇರುವ ಒಳಗಿರುವಂತಹ ಒಂದು ಶಕ್ತಿ.ಗೊತ್ತಾಗ್ತಾ ಇಲ್ಲ. ಅದು ಮುದುಡಿಕೊಂಡು ಬಿಟ್ಟಿದೆ. ಯಾವ ಶಕ್ತಿ ಕುಂಡಲಿನಿ ನಿಷತ್ತಾಗಿದ್ದಾಳೆ. ಇವುಗಳ ಚೇಷ್ಟೆಯಿಂದ ಏನಾಗಿದೆ? ಕುಂಡಲಿನಿ ಸ್ಥಬ್ದವಾಗಿ ಕುತಕೊಂಡು ಬಿಟ್ಟಿದ್ದಾಳೆ ನಮ್ಮಲ್ಲಿ.

ಆದ್ದರಿಂದ ಸಾಧಕ ಇದನ್ನು ಅರ್ಥ ಮಾಡಿಕೋಳ್ಳಬೇಕು. ಇವುಗಳ ಚೇಷ್ಟೆ ಏನಾಗಿದೆ? ಪಂಚ ಜ್ಞಾನೇಂದ್ರಿಯ ಚೇಷ್ಟೆ ಕೇವಲ ಅದು ಅದೋಮುಖವಾಗಿ ಹೋಗ್ತಾಇದೆ. ಕೇವಲ ಅದು ಅದೋಮುಖಾಂತರ ನಮ್ಮ ಹೊಕ್ಕಳಿನ ಕೇಳಾ ಭಾಗದಿಂದಲೇ ಎಲ್ಲ ಕ್ರಿಯೆಗಳನ್ನು ನಾವು ಮಾಡುತ್ತ ಇವೆ.ಅದು ಅದೋಮುಖ. ಊರ್ಧ್ವಮುಖ ಅಂದ್ರೆ ನಿತ್ಯಮುಖ ಮೇಲ್ಬಾಗಕ್ಕೆ ಬರುವಂತಹದು. ಆದ್ದರಿಂದ ಅದೋಮುಖದಲ್ಲಿ ಹೋಗ್ತಾ ಇರುವಂತಹ ನಮ್ಮ ಮನಸ್ಸಿನ ಚಂಚಲತೆ ಇದೆಯಲ್ಲಾ? ಅದರಿಂದಲ್ಲಿ ಕುಂಡಲಿನಿ ನಿಶಕ್ತಿಗಳಾಗಿ ಕುತಕೊಂಡಿದ್ದಾಳೆ.ಅವಳು ಜಾಗೃತಿ ಆಗಬೇಕು. ಕುಂಡಲಿನಿ ಜಾಗೃತಿ ಆಗಬೇಕು.

ನಮ್ಮಲ್ಲಿರುವ ಶಕ್ತಿ ಜಾಗೃತಿ ಆಗಬೇಕು ಅಂತ ಅಂದ್ರೆ ಅದು ಉದ್ರ್ವೋಮುಖ ಆಗಬೇಕು.ಹಾಗಾದ್ರೆ ಅದೋಮುಖವಾಗಿರುವ ಮನಸ್ಸು ಊರ್ದ್ವಮುಖಕ್ಕೆ ಬರಬೇಕು ಅಂದೆ. ಉದಾತ್ತೀಕರಣಗೊಳ್ಳಬೇಕು. ನಮ್ಮ ಮನಸ್ಸಿನ ಸ್ಥಿತಿ ಉದಾತ್ತೀಕರಣಗೊಳ್ಳಬೇಕು. ಅವುಗಳ ಕ್ರಿಯೆಗೆ ಮೂಲ ಕಾರಣವನ್ನ ಅರಿತು ನಮ್ಮಲ್ಲಿರುವಂತಹ ಈ ಚಂಚಲತೆ ಇರುವಂತಹ ಮೂಲ ಕಾರಣ ಅರ್ಥ ಮಾಡಿಕೊಂಡು ಪರಿಶುದ್ದವಾದಂತಹ ಅರಿವೆಂಬ

ನಮ್ಮಲ್ಲಿ ಅರಿವು ಜಾಗೃತಿ ಆಗಿದ್ದರಿಂದ ಉದಾತ್ತೀಕರಣ ಮಾಡಿಕೊಳ್ಳೋಕೆ ಸಾಧ್ಯ. ಇಲ್ಲಾ ಮನಸ್ಸಿನ ಉದಾತ್ತೀಕರಣ ಮಾಡ್ಕೋಬೇಕು ಅಂದ್ರೆ ನಮ್ಮಲ್ಲಿ ಅರಿವು ಜಾಗೃತಿ ಅರಿವು ಜಾಗೃತಿ ಆಗಬೇಕು ಅಂದ್ರೆ ಸಜ್ಜನರ ಸಂಘ ನಮಗೆ ಬೇಕು. ಹೃದಯದ ಮಡದಿ ಅಂದ್ರೆ ಪತ್ನಿ ಕುಂಡಲಿನಿ ನಮ್ಮ ಹೃದಯದ ಪ್ರೀತಿಯ ಪತ್ನಿ ಯಾವುದಾದರೂ ಇದ್ರೆ ಕುಂಡಲಿನಿ ಶಕ್ತಿ ಅಂತೆ. ಅದು ಕೈ ಹಿಡಿಬೇಕು. ಅವಳನ್ನು ಅಪ್ಪಿ ನಾವು ಒಂದಾಗಬೇಕು ಅಂದ್ರೆ ನಾವು ಹೆದ್ದಾರಿಯಲ್ಲಿ ಹೋಗಬೇಕು. ಭಯವಿರದ ರಾಜ ಬೀದಿಯಲ್ಲಿ ಹೋಗಬೇಕು. ಭಯವಿರದ ರಾಜ ಬೀದಿ ನಮ್ಮ ಶರೀರದಲ್ಲಿ ಯಾವುದಾದರೂ ಇದ್ರೆ ಅದು ಸುಷುಮ್ನನಾಳ ಸುಷುಮ್ನನಾಳ ಈ ಸುಷುಮ್ನನಾಳದಲ್ಲಿ ಕುಂಡಲಿನಿ ಕೆಳ ಭಾಗದಲ್ಲಿ ಆಧಾರ ಚಕ್ರದಲ್ಲಿ (ಮೂಲಧಾರ) ಅದು ಗುಪ್ತವಾಗಿರುತ್ತದೆ.

ಅದು ಸುಷುಮ್ನನಾಳ ಜಾಗೃತಿಯಾದರೆ. ಆದ್ರೆ ಸುಷುಮ್ನನಾಳ ಮೂಲಕವಾಗಿ ಸಹಸ್ರಾರವನ್ನು ತಲುಪುತ್ತದೆ. ಅಂದರೆ ಇಡಾ ಪಿಂಗಳ ನಾಡಿ ಬಿಟ್ಟು ಇವೆರಡು ಸ್ವಚ್ಛ ಆದಾಗ ಸುಷುಮ್ನನಾಳ ಓಪನ್ ಆಗುತ್ತದೆ. ಆಗ ಇಲ್ಲಿಂದ ಅಜ್ಞಾ ಚಕ್ರಕ್ಕೆ. ಅನಾಥ ಚಕ್ರದಿಂದ
ಆಜ್ಞಾ ಚಕ್ರಕ್ಕೆ ಅದರ ಒಂದು ಶಕ್ತಿ ಎನರ್ಜಿ ಪಾಸ್ ಆಗುತ್ತಿರುತ್ತದೆ. ಮಾನವನ ಬೆನ್ನುಹುರಿ ಅಥವಾ ಮೇರುದಂಡ ಅಂತ ನಾವೇನು ಕರೀತಾ ಇದ್ದೀವಿ. ಅದರ ಮಧ್ಯದಲ್ಲಿ ಸುಷುಮ್ನನಾಳ ಸೂಕ್ಷ್ಮವಾಗಿರುತ್ತದೆ. ಆದ್ದರಿಂದ ಹೊರಟಂತಹ ಇಡಾ ಪಿಂಗಳ ಸೂರ್ಯ ಚಂದ್ರನಾಡಿ ಇವುಗಳ ಶಕ್ತಿ ಸಾಮಾನ್ಯವಾಗಿ ಪ್ರಾಕೃತಿಕವಾಗಿ ಅದು ಅದೋಮುಖವಾಗಿರುತ್ತದೆ. ಇದೊಂದು ವೈಜ್ಞಾನಿಕತೆ ಇದೆ. ಇಷ್ಟಲಿಂಗ ಯೋಗದಲ್ಲಿ ವೈಜ್ಞಾನಿಕತೆ ಇದೆ ನೋಡಿ.

ಸೂರ್ಯನಾಡಿ ಬಲಗಣ್ಣಿನ ಪ್ರತಿನಿಧಿಸುತ್ತದೆ. ಚಂದ್ರನಾಡಿ ಎಡಗಣ್ಣಿನ ಪ್ರತಿನಿಧಿಸುತ್ತದೆ. ಇಲ್ಲಿ ಧನವಿದ್ಯುತ್ ಋಣವಿದ್ಯುತ್ ಇದೆ. ಎರಡು ಕಣ್ಣುಗಳಲ್ಲಿ ಅವೆರಡೂ ಸೇರಿ ನಮಗೆ ಬಾಹ್ಯವಸ್ತು ಕಾಣುತ್ತದೆ. ಅವೆರಡೂ ಒಂದೇ ಆಗಬೇಕು. ಈಗ ನೀವು ಹೇಗೆ ವಿದ್ಯುತ್ತನ್ನು ತಗೋಬೇಕಾದ್ರೆ ಅಲ್ಲಿ ಪ್ಲಸ್ ಮೈನಸ್ ವೈರ್ಗಳನ್ನು ದನ ಋಣ ಎರಡನ್ನು ಸೇರಿಸುತ್ತೀರಿ. ಸೇರಿಸಿದಾಗ ಕರೆಂಟ್ ಬರುತ್ತವೆ.ಹಾಗೆ ಈ ಶರೀರವು ಸಹ ಪ್ಲಸ್ ಮೈನಸ್ ಅಂದ್ರೆ ಬಲಕಣ್ಣು ಎಡಕಣ್ಣು

ಎಷ್ಟು ಸೂಕ್ಷ್ಮ ಇದೆ. ಆದ್ದರಿಂದ ಎರಡು ಕಣ್ಣಿನ ರೇಖೆಗಳು ನೇರವಾಗಿ ಸೇರಲು ಸಾಧ್ಯ ಇಲ್ಲ. ಅದಕ್ಕೆ ಅಕ್ಕಮಹಾದೇವಿಯವರು ಇಷ್ಟಲಿಂಗ ತ್ರಾಟಕ ಮಾಡ್ತಾ ಹೋದಾಗ ಎರಡು ಕಣ್ಣು ನೇರವಾಗಿ ಲಿಂಗನ ನೋಡ್ತಾ ನೋಡ್ತಾ ನೋಡ್ತಾ ಹೋದಾಗ ಪ್ಲಸ್ -

ಎರಡು ಸೇರಿತು. ಅಲ್ಲಿ ಕಿರಣಗಳ ಒಂದು ಅವಿರ್ಭಾವ ಆಗುತ್ತದೆ. ಎರಡು ಒಟ್ಟಿಗೆ ಸೇರಿದಾಗ ಸಾಮಾನ್ಯವಾಗಿ ನಮ್ಮ ಶಕ್ತಿ ಅದೋಮುಖವಾಗಿ ಪ್ರಾಕೃತಿಕವಾಗಿ ಹೋಗ್ತಾ ಇರುತ್ತದೆ.

ಮನಸ್ಸು ಚಂಚಲತೆಯಿಂದ ಅದೋಮುಖವಾಗಿ ಆ ಎನರ್ಜಿ ಹೋಗ್ತಾ ಇರುತ್ತದೆ. ಆದರೆ ಮನಸ್ಸು ಏಕಾಗ್ರತೆಗೆ ಬಂದಾಗ ಲಿಂಗ ತ್ರಾಟಕದಿಂದ ಏಕಾಗ್ರತೆಗೆ ಬಂದಾಗ ಅದು ಅದೋಮುಖವಾಗಿ ಚಲಿಸುತ್ತ ಇರುವಂತಹ ಆ ಶಕ್ತಿ ಪ್ರಾಣ ವಿದ್ಯುತ್, ನಮ್ಮ ಶರೀರ ಇರುವಂತಹ ಪ್ರಾಣ ವಿದ್ಯುತ್ತು ತೀವ್ರವಾದ ಸಾಧನೆಯಿಂದ ಒಂದು ಏರಡು ದಿನಕ್ಕೆ ಆಗುವಂಥದ್ದಲ್ಲ. ನಮ್ಮ ಮನಸ್ಸು ತನು ಮನ ಭಾವ ಎಲ್ಲ ಪರಿಪಕ್ವವಾಗಬೇಕು. ಹಾಗಾದಾಗ ಆ ಬಹಿರ್ಮುಖವಾಗಿ ಅದು ಅದೋಮುಖವಾಗಿ ಹೋಗ್ತಾ ಇರುವಂತಹ ಪ್ರಾಣ ವಿದ್ಯುತ್ತು ಏಕಾಗ್ರಗೊಂಡು ಯೋಗಶಕ್ತಿಯಿಂದ. ಆ ಪ್ರಾಣ ವಿದ್ಯುತ್ತು ಊರ್ಧ್ವಮುಖ ಆಗುತ್ತದೆ. ಕುಂಡಲಿನಿ ಸಡಿಲಗೊಳ್ಳುತ್ತಾಳೆ.

ಇಡ ಪಿಂಗಳ ಸ್ವಚ್ಛವಾಗುತ್ತದೆ. ಕುಂಡಲಿನಿ ಊರ್ಧ್ವಮುಖಗೊಂಡು ಸುಷುಮ್ನ ನಾಡಿ ಮೂಲಕವಾಗಿ ಸುಷುಮ್ನನಾಳ ಏರಲು ನಿದಾನವಾಗಿ ತೊಡಗುತ್ತದೆ. ಸತ್ತಂತಿರುವಂತಹ ಕುಂಡಲಿನಿಗೆ ನಾಗರ ಹಾವು ಬುಟ್ಟಿಯಲ್ಲಿ ಇದ್ದಾಗ ನೀವು ಪುಂಗಿ ಊದಿದಾಗ ಹೇಳುತ್ತ ಅದು ಅದೇ ರೀತಿಯಾಗಿನಿ ಕೋಲಿನಿಂದ ಬಡಿದಾಗ ಹೆಡೆ ಎತ್ತಿದ್ದು ನಿಲ್ಲುವಂತೆ ಈ ಭವಿಸಂಗವಳಿದು ಭಕ್ತನಾದಅಂತಹ ಒಬ್ಬ. ವ್ಯಕ್ತಿಗೆ ಶರಣ ಸತಿಗೆ ಲಿಂಗಪತಿಯ ಒಂದು ಘನವಾದ ಇರುವು ಅರ್ಥವಾಗುತ್ತದೆ. ಅದಕ್ಕಾಗಿ ಅಕ್ಕಮಹಾದೇವಿ ತಾಯಿಯವರು ಬಹಳ ಸ್ಪಷ್ಟವಾಗಿ ನಮಗೆ ತಿಳಿಸುತ್ತಿದ್ದಾರೆ. ಬಹಿರ್ಮುಖವಾದ ಮನಸ್ಸು ಏಕಾಗ್ರಗೊಳ್ಳಬೇಕು.ಆಗ ಅದೋಮುಖವಾಗಿ ಹೋಗುತ್ತಿರುವಂತಹ ನಮ್ಮ ಶರೀರದ ಎನರ್ಜಿ ಊರ್ದ್ವಮುಖಗೊಳ್ಳಬೇಕು. ಊರ್ಧ್ವಮುಖಗೊಂಡಾಗ ಆಕಸ್ಮಿಕವಾಗಿ ಇಂತಹ ಒಂದು ಘಟನೆರಿಗೆ ನಮಗೆ ಆತ್ಮಶಕ್ತಿಯ ಒಂದು ಅನುಭವವಾಗುತ್ತದೆ. ಪ್ರಾಣದ ಮೇಲೆ ಹಿಡಿತವನ್ನು ಸಾಧಿಸಿ ಅದಕ್ಕೆ ಪ್ರಾಣಾಯಮ ಮಾಡಿ ಅಂತಾರೆ. ಅದರಿಂದ ಯೋಗ ಮಾಡಬೇಕಾದ್ರೆ ಸಹಜವಾಗಿ ತಾನೇ ಪ್ರಾಣಾಯಾಮ ಆಗುತ್ತದೆ. ಪ್ರಾಣಾಯಾಮ ಆದಾಗ. ಅಂತಹ ಒಂದು ಎನರ್ಜಿ ನಿಮಗೆ ಕುಂಡಲಿನಿ ಶಕ್ತಿ ಮೇಲೆ ಏರುತ್ತದೆ. ಆಗ ಆತ್ಮನ ಅನುಭವವಾಗುತ್ತದೆ. ಇಂತಹ ಒಂದು ಭೌತಿಕವಾದ ಸಾಧನಗಳ ಅವಶ್ಯಕತೆ ನಮಗೆ ಬೇಕಿಲ್ಲ.

ಇಷ್ಟ ಲಿಂಗದ ಮೇಲೆ ದೃಷ್ಟಿ ಇಟ್ಟು ಬಿಟ್ಟರೆ ತ್ರಾಟಕಯೋಗ ಮಾಡಿದ್ರಿ. ಕುಂಡಲಿನಿ ಶಕ್ತಿ ಪ್ರಾಣಾಯಾಮದ ಬಲದಿಂದ ಊರ್ಧ್ವಮುಖವಾಗಿ ರಾಜ ಬೀದಿಯಾದ ದೇವನ ಮಾರ್ಗವಾದ ನಡು ಬಟ್ಟೆಯೊಳಗೆ ನಡೆವೆನು.ಲ್ಲಿ ಅಂದ್ರೆ ಸುಷ್ಮುಮ್ನ ನಾಡಿನಲ್ಲಿ ಅದು ನಡೆಯುತ್ತದೆ ಎನ್ನುವಂತಹ ಒಂದು ಪದ ಮಾತನ್ನ ಜ್ಞಾನವನ್ನ.ಈ ಪದ್ಯದ ಮೂಲಕವಾಗಿ ನಮಗೆ ತಿಳಿಸುತ್ತಿದ್ದಾರೆ.

13) ನುಡಿಯಬಾರದ ಹಣ್ಣು ಕಡೆಯೊಳಗಿರಳಾಗಿ
ಮಡದಿಯೋವಳು ಅದಕಂಡು | ಗ್ರಹಿಸಲ್ಕೆ
ನುಡಿಯೊಳಗಾಗಿ ಮೆರೆಯಿತು.

ಸಾಧನೆಯ ಆ ಹಾದಿಯಲ್ಲಿ ಹೋಗಬೇಕಾದರೆ ನುಡಿಯಬಾರದ ಹಣ್ಣು. ಯಾವುದೇ ಆಗಲಿ ನಾವು ಬಾಯಲ್ಲಿ ಏನು ಬೇಕಾದರೂ ಹೇಳಬಹುದು. ಆದರೆ ಅನುಭವನ್ನ ಬಾಯಲ್ಲಿ ಹೇಳೋಕೆ ಆಗೋದಿಲ್ಲ. ಮಾತಿಗೆ ಸಿಕ್ಕುವುದಿಲ್ಲ.ಮನಸ್ಸಿಗೆ ಗೋಚರವಾಗುವುದಿಲ್ಲ. ಅದು ಅನುಭವವೇದ್ಯ ಮಾತ್ರ. ಅಲ್ಲಿ ಅಂತ ಒಂದು ಅನುಭವದ. ಹೇಳಬಾರದಂತಹ ರುಚಿಸಲಾರಾದಂತಹ ಒಂದು ಅದ್ಭುತವಾದ ಹಣ್ಣು

ಇದೆ. ಆ ಹಣ್ಣನ್ನ ಅದು ಎಲ್ಲೋ ಒಂದು ಕಡೆ ಗುಪ್ತವಾಗಿ ಸುಪ್ತವಾಗಿದೆ. ನಮ್ಮ ಈ ವ್ಯವಸ್ಥೆಯಲ್ಲಿ ಅದನ್ನ ಮಡದಿಯೋವಳು ಅದ ಕಂಡು ಹಿಡಿದರು. ಗ್ರಹಿಸಿದಳು. ಯಾರು ಜ್ಞಾನಶಕ್ತಿ.ಇಚ್ಛಾಶಕ್ತಿ ಸಂಕಲ್ಪ. ಕ್ರಿಯಾಶಕ್ತಿ ಸಾಧನೆಯಲ್ಲಿ ಹೆಜ್ಜೆ ಇಡುವಂತದ್ದು ಜ್ಞಾನಶಕ್ತಿ.ಅದನ್ನ ಅನುಭವಕ್ಕೆ ತಂದುಕೊಳ್ಳುವಂತದ್ದು.

ಜ್ಞಾನಶಕ್ತಿಯ.ಒಳಗಿರುವಂತಹ ಎರಡು ಶಕ್ತಿಗಳು ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿ. ಇವುಗಳನ್ನ ಕಂಡು.ಈ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿವರೆಗೆ ದ್ವಂದ್ವವಿದೆ.ಆದರೆ.ಪರಾಶಕ್ತಿಯ ನೆಲೆಗೆ ಹೋದಾಗ ಅಲ್ಲಿ.ಈ ಹೇಳುವಂತಹ ಕೇಳುವಂತಹ ಎರಡು ನೆಲೆಯನ್ನು ನಾವು ಕಳೆದುಕೊಳ್ಳುತ್ತೇವೆ.ಇದನ್ನು ಕಂಡುಗ್ರಹಿಸಲ್ಕೆ ಗ್ರಹಿಸಿದಾಗ ಏನಾಯ್ತು ಅಂದ್ರೆ ನಾನು ಪರಾನೆಲೆಯನ್ನು ತಲುಪಿದೆ.ಆ ವ್ಯವಸ್ಥೆಯಲ್ಲಿ ಹೋದಾಗ ಏನಾಯ್ತು ಅಂದ್ರೆ ನುಡಿಯೊಳಗಾಗಿ ಮೆರೆ ಇತ್ತು.ಅಲ್ಲಿ ನುಡಿ ನಿಂತುಹೋಯ್ತು.ಅಲ್ಲಿ ಏನು ಕಂಡು ಬಂತು ಅಂದ್ರೆ ಏನು ಹೇಳಲಿಕ್ಕೆ ಆಗದೀರುವತ್ತದು ಮಾತಿನ ಶಬ್ದದೊಳಗಣ ನಿಶ್ಶಬ್ದ ನಮ್ಮ ಕಣ್ಮುಂದೆ ಕಂಡು ಬಂತು. ಈ ಎಲ್ಲ ಕೋಟೆಯನ್ನು ಕಟ್ಟಿ ಅದನ್ನು ಒಳಗೆ ಇಟ್ಟುಕೊಂಡ ಶಬ್ದವೇ,ಆದರೆ ಆ ನಿಶಬ್ದ ನಮ್ಮ ಅನುಭವಕ್ಕೆ ಬಂದಾಗ,ಶಬ್ದ ಖಾಲಿಯಾಗಿಬಿಟ್ಟಿರುತ್ತೆ. ಶಬ್ದದೊಳಗಣ ನಿಶ್ಶಬ್ದವನ್ನು ಹರಿಯೋ ಇದೆಯಲ್ಲ. ಇದು ಯೋಗಸಾಧನೆಯ ವೈಶಿಷ್ಟ್ಯ.ಅಕ್ಕಮಹಾದೇವಿಯವರು ನಮಗೆ ಕಲ್ಪಿಸಿಕೊಟ್ಟಿದ್ದು ಅಂಗ ಗುಣಗಳನ್ನು ಲಿಂಗ ಗುಣಗಳನ್ನಾಗಿ ಪರಿವರ್ತಿಸುವುದು.

ಸಾಧನೆಗೆ ನಿಲುಕದೆ ಇರುವಂತ ಅದ್ಭುತವಾದ ನೆಲೆಯನ್ನು ತಲುಪುವ ವ್ಯವಸ್ಥೆ ಮಾಡುವುದು. ಅದು ಲಿಂಗ ಯೋಗ, ಆ ಲಿಂಗ ಯೋಗದ ಕಡೆಗೆ ಕರಕೊಂಡು ಹೋಗುವಂತಹ ಸ್ಫೂರ್ತಿದಾಯಕವಾದದ್ದು. ಅಂಗ ಯೋಗ ಈ ಅಂಗ ಲಿಂಗ ಇವೆರಡರ ಸಮನ್ವಯ ಇದು ಯೋಗ, ಯೋಗ ಅಂದರೆ ಎರಡನ್ನು ಜೋಡಿಸುವುದು ಯೋಗ ಅನ್ನುಅಂತ ಶಬ್ದವನ್ನ ಅಕ್ಕಮಹಾದೇವಿಯವರು ಏನು ಹೇಳಿದ್ರು, ಎರಡು ಅಳಿದು ಕೂಡುವ ಯೋಗ ಅಂತ ಹೇಳಿದ್ರು. ಆ ಯೋಗವನ್ನು ನಾವು ಸಾಧನೆ ಮಾಡುವದಕ್ಕೆ .ಯಾವ ಹೆಜ್ಜೆಯನ್ನು ಇಟ್ಟಕೊಂಡು ಹೋಗಬೇಕು ಅನ್ನೋದು ಇದು.ಯೋಗಾಂಗ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು ಮುಂದೆ ಏನು ಮಾಡಬೇಕು? ಈ ನಾದ ಯಾವರೀತಿಯಲ್ಲಿ ತನ್ನ ಅದ್ಭುತತೆಯನ್ನು ಮೆರೆದು? ಈ ಲೋಕದ ಕಣಕಣಗಳಾಗಿ ವಿಭಾಗವಾಗಿ ಏನು ಅನ್ನಲ್ಲಿಲ್ಲದ ಮಹಾಘನ ವಸ್ತು ಇಡೀ ನಮ್ಮ ಆದಿ ಆಧಾರವನ್ನೆಲ್ಲ ಭೇದಿಸಿ ವಿಶಾಲವಾಗಿ ಬೆರೆತು ನಿಂತಂತಹ ಒಂದು ವ್ಯವಸ್ಥೆ .

ಸಾಧಕನು ಸಾಧನೆ ಮೂಲಕವಾಗಿ ಕುಂಡಲಿನಿ ಶಕ್ತಿಯನ್ನ ಜಾಗೃತಿ ಮಾಡಬೇಕು ಅಂದ್ರೆ ಬಡಿದೆಬ್ಬಿಸಬೇಕು. ಅದು ಮೇಲ್ಮುಖವಾಗಿ ತೆಗೆದುಕೊಂಡು ಹೋಗಲಿಕ್ಕೆ ಆತ ಸಾಧನೆಯನ್ನು ಮಾಡಬೇಕು. ಹಾಗೆ ಕುಂಡಲಿನಿ ಶಕ್ತಿಯನ್ನ ಶಕ್ತಿಯು ಎಲ್ಲ ಚಕ್ರಗಳನ್ನು ಬಳಸುತ್ತಾ ಹೋಗಿ ಸಹಸ್ರಾರವನ್ನು ತಲುಪಬೇಕು. ಸಹಸ್ರಾರುವೆಂಬ ಬೆಟ್ಟದಲ್ಲಿ ಕುಂಡಲಿನಿ ತಲುಪುವುದೇ ತಡ ಅಲ್ಲಿ ಪ್ರಜ್ವಲ್ವಾದಂತಹ ಒಂದು ದಿವ್ಯವಾದ ಬೆಳಕು ಉಂಟಾಗುತ್ತದೆ. ಕೋಟಿ ರವಿ ಶಶಿಗಳಿಗೆ ಮೀಟಿದ ಪ್ರಭೆ ಬಂದು ನಾಟಿತ್ತು ಎನ್ನ ಕರದಲ್ಲಿ ಎಂಬಂತಹ ಮಾತನ್ನು ಅಕ್ಕಮಹಾದೇವಿ ತಾಯಿ ಅವರು ಒಂದು ಕಡೆ ಹೇಳುತ್ತಿದ್ದರೆ. ಒಂದು ಸೂರ್ಯನ ಬೆಳಕನ್ನೇ ಒಂದು ಚಂದ್ರನ ಬೆಳಕನ್ನೇ ನಮಗೆ ಅನಿಸಿಕೊಳ್ಳೋಕಾಗುತ್ತಾ ಇಲ್ಲ. ಅಂತಹ ಕೋಟ್ಯಾಂತರ ವಿಶೇಷಬೆಳಕು ಬಂದರೆ ಹೇಗಿರುತ್ತದೆ. ಅಂತಹ ಬೆಳಕು ನಮ್ಮ ಸಹಸ್ರಾರದಲ್ಲಿದೆ. ಅದನ್ನ ನಾವು ಅನುಭವಿಸಬೇಕು. ಆ ಬೆಳಕನ್ನೇ ನೋಡಬೇಕು ಆನಂದಿಸಬೇಕು. ಅದು ಪರಮಾತ್ಮನ ಬೆಳಗು ಭವ್ಯವಾದ ಬೆಳಗುವ ಶಕ್ತಿ ಪ್ರತಿಯೊಬ್ಬರ ದೇಹದಲ್ಲಿದೆ. ಆ ಶಕ್ತಿನೇ ಹಣ್ಣು.ಅಕ್ಕನವರು ಎಲ್ಲಿ ಹೇಳುತ್ತಿದ್ದಾರೆ, ನುಡಿಯಬಾರದ ಹಣ್ಣು ಕಡೆಯೊಳಗಿರಳಾಗಿ ಮಡದಿಯೋವಳು ಅದಕಂಡು | ಗ್ರಹಿಸಲ್ಕೆ ನುಡಿಯೊಳಗಾಗಿ ಮೆರೆಯಿತು. ಆದ್ದರಿಂದ ಆ ಶಕ್ತಿ ಹಣ್ಣು ಅದನ್ನ ಅನುಭವಿಸಬೇಕು.

ಆನಂದವನ ಸಾಧಕ ಪಡೆಯಬೇಕು. ಇನ್ನೊಬ್ಬರ ಮುಂದೆ ಅದನ್ನು ಹೇಳಲಿಕ್ಕೆ ಆಗೋದಿಲ್ಲ. ಪ್ರತಿಯೊಬ್ಬ ವ್ಯಕ್ತಿ. ಅವರವರೆ ಅದನ್ನ ತಿಂದು ಅನುಭವಿಸಬೇಕು.ನಾವು ಊಟ ಮಾಡಿದ ನಮ್ಮ ಹೊಟ್ಟೆ ತುಂಬುತ್ತೆ. ನೀವು ಊಟ ಮಾಡಿದರೆ ನೀಮ್ಮ ಹೊಟ್ಟೆ ತುಂಬುತ್ತೆ. ನಾವು ಊಟ ಮಾಡಿದ ತಕ್ಷಣ ನಿಮ್ಮ ಹೊಟ್ಟೆ ತುಂಬುವುದಿಲ್ಲ. ಅದನ್ನು ಅನುಭವಕ್ಕೆ ಆಗೋದಿಲ್ಲ. ಆನಂದವನ್ನು ಆ ಎನರ್ಜಿ ಅದೇ ರೀತಿಯಾಗಿನಿ ಈ ಪರಮಾತ್ಮನ ಇರುವನ್ನ ಅವರವರೇ ಅನುಭವಿಸಬೇಕು.

ದಿವ್ಯಶಕ್ತಿ ಸಹಸ್ರುಚಕ್ರುದಲ್ಲಿ ಅವಿತುಕೊಂಡು ಕುಳಿತುಕೊಂಡಿದೆ. ಕುಂಡಲಿನಿ ಶಕ್ತಿಯು ಗ್ರಹಿಸಲು ಆಗ ಆನಂದ ಆಗುತ್ತದೆ. ಮನಸ್ಸಿಗೂ ಶರೀರಕ್ಕೂ ಸಂಬಂಧ ಇರೋದ್ರಿಂದ ಮನಸ್ಸು ಶರೀರವನ್ನ ಕಂಟ್ರೋಲ್ ಮಾಡುತ್ತದೆ. ನಾವು ಅದನ್ನು ಕಂಟ್ರೋಲ್ ಮಾಡಬೇಕು. ನರಮಂಡಲದ  ಮೇರುದಂಡ.ಬೆನ್ನುಹುರಿ ಕೆಳಗಿನ ತುದಿಯಾದ ಮೂಲಾಧಾರದಿಂದ ಹೊರಟು ಮೆದುಳಿನ ಎಲ್ಲಕ್ಕೂ ಮೇಲಿನ ಕೊನೆಯ ಸಹಸ್ರಾರ ಚಕ್ರುದತನಕವೂ  ಸೇರಿಕೊಂಡಿದೆ. ಹಾಗೆ ಮಾನವನ ಕೆಳಗಿನ ತುದಿಯೇ ಅಂದ್ರೆ ಭೂಮಿ ಅಂತಾನೇ ಹೇಳಬಹುದು. ಮನುಷ್ಯನ ದೇಹವೊಂದು ಅದ್ಭುತ ರಚನೆ. ಈ ಸಯೋಜನೆಗಳಲ್ಲಿ ಕೇಂದ್ರು ನರಮಂಡಲ  ಮೇರುದಂಡ ಅಥವಾ ಬೆನ್ನುಹುರಿ ಕೆಳಗಿನ ತುದಿ ಮೂಲಾಧಾರದಿಂದ ಹೊರಟು ಅದು ಮೆದುಳಿನ ಎಲ್ಲಕ್ಕೂ ಸಹ ಕೊನೆಯ ಸಹಸ್ರಾರವನ್ನು ಸೇರುತ್ತದೆ.

ಶರೀರದ ಈ ಬೆನ್ನುಮೂಳೆ ಮೂಲಕ ಶರೀರದ ಎಲ್ಲ ಭಾಗಗಳಿಗೆ ನರ ಮಂಡಲಗಳ ವ್ಯವಸ್ಥೆಯಾಗಿದೆ. ಇದು ನಿಮಗೆಲ್ಲಾ ಗೊತ್ತಿರುವಂತದ್ದು. ಅದು ತನ್ನ ಕ್ರಿಯೆಯನ್ನ ಅಲ್ಲಿ ಮಾಡ್ತಾ ಇರುತ್ತದೆ. ಅದರ ಮೂಲಕ ಈ ಶರೀರದ ಎಲ್ಲಾ ಕ್ರಿಯೆಗಳು ನಡೀತಾ ಇದೆ. ಆದ್ದರಿಂದ ನರಮಂಡಲದ ದೇಹಕ್ಕೆ ಒಂದು ಗಿಡದ ಹೋಲಿಕೆಯ. ಕೆಳಗಡೆಯಿಂದ ಹೊರಟಂತಹ ಈ ಒಂದು ಬೇರು ಕೆಳಗಡೆ ಇದೆ. ಇಲ್ಲಿಂದ ಹೊರಟ ಅಂತಹದ್ದು ಏನಿದೆ ಮೇಲೆ ಹೋಗಿ ಅರಳಿ ನಿಂತಿದೆ. ಅಲ್ಲಿ ಒಂದು ಪುಷ್ಪ ಇದೆ. ಆ ಪುಷ್ಪವನ್ನು ನೋಡಬೇಕು.
ಆ ಹಣ್ಣನ್ನು ತಿನ್ನಬೇಕು. ಅದು ಹಣಕ್ಕೂ ಹೋಲಿಸಿದರೆ ಹಣ್ಣನ್ನು ತಿನ್ನಬೇಕು, ಅನುಭವಿಸಬೇಕು ಅಂತ ಹೇಳಿದ್ದಾರೆ. ಶರೀರದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಚಕ್ರುಗಳಿದ್ದವೆ. ಅವು ಒಂದು ರೀತಿಯಲ್ಲಿ ಒಂದು ಹೂಗಳಿದ್ದಂತೆ.. ಅದು ಸಹಸ್ರಾರದಲ್ಲಿ ಹಣ್ಣು ಬಿಟ್ಟಿದೆ. ಅದು ಬೆಳ್ಳಂಬೆಳ್ಳಗೆ ಇಂತಹ ಹಣ್ಣು ಅದನ್ನ ನಾವು ಗಮನಿಸಬೇಕು, ಅನುಭವಿಸಬೇಕು ತಿನ್ನಬೇಕು ಅಂತ ಅಂದ್ರೆ ನಾವು ಲಿಂಗ ತ್ರಾಟಕದಲ್ಲಿ ತೊಡಗಿದಾಗ ಕೆಳಗಿರುವಂತಹ ಕುಂಡಲಿನಿ ಶಕ್ತಿ ಜಾಗೃತಿಕೊಂಡು ಎಲ್ಲ ನರನಾಡಿಗಳ ಮೂಲಕವಾಗಿದ್ದು ಸಂಚಾರವನ್ನು ಮಾಡುತ್ತ ಹೋಗಿ ಅಲ್ಲಿ ಬೆಳ್ಳಂಬೆಳಗ್ಗೆನ್ನು ತೋರಿಸುತ್ತದೆ. ನಮಗೆ ಸಾಧ್ಯವಾಗುತ್ತದೆ ಎಂಬಂತಹ ಮಾತನ್ನು ಅಕ್ಕಮಹಾದೇವಿಯವರು ತಿಳಿಸಿದ್ದರೆ.

14) ನೂರೆಂಟು ಮಣಗಳ| ಮೂರು ಭಾಗವ ಮಾಡಿ
ಮೂರು ಪುರುಷರಿಗೆ ಅಳವಡಿಸಿ | ಮೂವರನು
ಸೇರಿ ನಾನಳಿದು ಬಯಲಾದೆ

ಈ ಜಗತ್ತಿನ ನೆಲೆಯಲ್ಲಿ ಗುರುತಿಸುವಂತಹ ವ್ಯವಸ್ಥೆ ಇದೆಯಲ್ಲ. ಇವೆಲ್ಲವನ್ನೂ ನಾನು ಯಾವ ರೀತಿ ಮೀರಿ ನಾನು ಪರಿಪೂರ್ಣತೆಯನ್ನು .ತಿಳ್ಕೊಂಡೆ ಅನ್ನೋದನ್ನ ಈ ಮೂರು ಸಾಲುಗಳಲ್ಲಿ ವಿಶ್ವಗುರು ಅಕ್ಕಮಹಾದೇವಿಯವರು ತಿಳಿಸಿದ್ದಾರೆ.ಈ ಮೂರು ಸಾಲುಗಳು  ಮೂರು ದಿನದವರೆಗೂ ಹೇಳಿದರೂ ಮುಗಿಯುವುದಿಲ್ಲ. ಯೋಗದ ಮಾರ್ಗ ಇದು ನೂರೆಂಟು ಮಣಿಯನ್ನು, ಕುರಿತು ಹೇಳಬೇಕು ಅಂದ್ರೆ ಒಂದೊಂದು ಮಣಿಯನ್ನ ವಿವರಣೆ ಮಾಡ್ತಾ ಹೋದ್ರೆ 108 ದಿನಗಳು  ಬೇಕಾಗುತ್ತದೆ. ಒಂದು ದೊಡ್ಡಪಾಠವೆ ಆಗುತ್ತದೆ.

ನಮ್ಮ ಆತ್ಮ ಚಿಂತನೆ ಮಾಡಬೇಕಾದರೆ ನೂರೆಂಟು ಹೆಜ್ಜೆ ಇಟ್ಟುಕೊಂಡು ಹೋಗಬೇಕಾಗುತ್ತದೆ.ಇದನ್ನ ನಾನು ಏನು ಮಾಡಿದ್ದೇನೆ.ನನ್ನ ಸಾಧನೆಯ ನೆಲೆಯಲ್ಲಿ ಅದನ್ನ ನಾನು ಮೂರು ಭಾಗ ಮಾಡಿದ್ದೇನೆ. ಅದನ್ನ ಮೂರು ಪುರುಷರಿಗೆ ಕೊಟ್ಟು ನಾನು ಮೂವರನ್ನು ಸೇರಿ ಬಯಲಾಗಿ ಬಿಟ್ಟಿದ್ದೇನೆ. ಗುರು, ಲಿಂಗ, ಜಂಗಮ.ಈ ರೀತಿ ವಿಭಾಗ ಮಾಡಿ ಮೂರು ಪುರುಷರಿಗೆ ಅಳವಡಿಸಿ ಬಿಟ್ಟಿದ್ದೇನೆ. ಯಾವುದು ಒಂದು ಇಷ್ಟ ಲಿಂಗ ಶರಣ ಸತಿ ಲಿಂಗ ಪತಿ, ಮೂರು ಪುರುಷರು ಲಿಂಗ ಸ್ವರೂಪಿ ಲಿಂಗವೇ ಆ ಲಿಂಗದಲ್ಲಿ ಇಷ್ಟಲಿಂಗಕ್ಕೆ , ಪ್ರಾಣಲಿಂಗಕ್ಕೆ ಭಾವಲಿಂಗಕ್ಕೆ ಇವುಗಳನ್ನು ಅಳವಡಿಸಿ ಬಿಟ್ಟು ನಾನು ಮೂವರು ಸೇರಿ ಇಷ್ಟಪ್ರಾಣ. ಭಾವಗಳನ್ನ ಸೇರಿ ಅವೆಲ್ಲವನ್ನು ಮಹಾಲಿಂಗ ಒಳಗೆ ಮಾಡಿಕೊಂಡು ನಾನು ಲಿಂಗ ಅಶರೀರಿಯಾಗಿದ್ದಾನೆ. ಲಿಂಗ ಸ್ವರೂಪಿಯಾಗಿದ್ದೇನೆ.ಮೂವರು ಪುರುಷರಿಗೆ ಅಳವಡಿಸಿ ಮೂವರನ್ನು ಸೇರಿ ತಾನಳಿದು ಬಯಲಾದೆ ಅಂಗ ಗುಣಗಳೆಲ್ಲ ಅಳಿಸಿಹೋಯಿತು. ಲಿಂಗ ಗುಣಗಳಷ್ಟೇ ಉಳಿದು.ಅದರ ಬಗ್ಗೆ ಇನ್ನು ವಿಶೇಷವಾಗಿರುವಂತ ಚಿಂತನೆ ಇದೆ. ಅದನ್ನು ಮುಂದೆ ಬರುತ್ತದೆ.ಮುಂದೆ ಹೇಳೋಣ.ಹಾಗಾದರೆ? ಇದಿಷ್ಟೇ ನಾನು ಮಾಡಿದೆ. ಆದರೆ ಈ ನಾದದಿಂದ ಕಲೆಗಳ ವ್ಯವಸ್ಥೆ ಇದೆಯಲ್ಲ.ಇವುಗಳನ್ನೆಲ್ಲ ಸೇರಿಸಿದಂತ ಒಂದು ಅದ್ಭುತವಾದಂತಹ ಲೆಕ್ಕ ಏನು? ಅದನ್ನ ನಾವು ಗಮನಿಸಬೇಕಲ್ಲ?ಆ ಒಂದು ಏನಾಯಿತು? ಅನಾಹತ ನಾದ ಒಂದೇ ಇರೋದು ಪರ ವಾಕ್ಯ ಇದ್ಯಲ್ಲ. ನಮ್ಮ ಹೊಕ್ಕಳ ನಾಭಿಯಿಂದ ಹೊರಟತಕ್ಕಂತದ್ದು ಅನಾಹತನಾದ.ಅಲ್ಲಿಂದ ಮುಂದಕ್ಕೆ ಬಂದಾಗ ಅದಕ್ಕೊಂದು ಆಕಾರ ಬಂತು. ನಿರಾಕಾರವೆದ್ದು ಸಹಕಾರವಾಯಿತು. ಹೃದಯದಲ್ಲಿ ಕಲಬೇರಿಕೆ ಇಲ್ಲ.ಅದಕೋಸ್ಕರ ನಮ್ಮ ಹಿರಿಯರು ಯಾವುದಾದರೂ ಒಂದು ಸ್ಪಷ್ಟವಾದಂತಹ ಸುಳ್ಳಲ್ಲದ ಮಾತು ಹೇಳಬೇಕು ಅಂತ ಪ್ರಶ್ನೆ ಬಂದಾಗ ನಮ್ಮ ಜನ ಸಾಮಾನ್ಯವಾಗಿ ಹೇಳುತ್ತಾರೆ. ಎದೆ ಮುಟ್ಟಿಕೊಂಡು ಹೇಳು ಅಂತ.ಕಾರಣ ಏನು ಅಂತಂದ್ರೆ ಆ ಎದೆಯಲ್ಲಿ ಕಲಬೆರಕೆ ಇರುವುದಿಲ್ಲ.ಆ ನೆಲೆಯಿಂದ ಮುಂದೆ ಬರುವಂತಹ ಒಂದು ಆಲೋಚನೆಗಳು ,

ಧ್ಯಾನಕ್ಕೆ ಕುಳಿತಾಗ ಹಿಡಿಯುವ ಜಪಮಾಲೆಯ ಮಣಿ ಸಂಖ್ಯೆ ನೂರಾ ಎಂಟು ಯಾವುದಾದರು ಮಂತ್ರವನ್ನು ಜಪಿಸಬೇಕು ಅಂದ್ರೆ ನೂರಾ ಎಂಟು ಬಾರಿ ಜಪಿಸಬೇಕು ಎಂಬ ಸಲಹೆ ನೂರಾ ಎಂಟು ಬಾರಿ ಸೂರ್ಯ ನಮಸ್ಕಾರ ಮಾಡುವುದು ಸೂಕ್ತ. ಹೀಗೆ ಧಾರ್ಮಿಕ ಕ್ರಿಯೆಗಳಿಗೆ ಸಂಬಂಧಿಸಿದ ಆಚರಣೆಗಳಲ್ಲಿ ನೂರಾ ಎಂಟು ಸಂಖ್ಯೆಯನ್ನ ಬಹಳಷ್ಟು ಬಾರಿ ಬಳಸುತ್ತೇವೆ. ಆಚರಣೆಗಳಿಗೂ ಈ ನೂರಾ ಎಂಟು ಸಂಖ್ಯೆಗೂ ಇರುವ ನಂಟೇನು ಅದರ ಮಹತ್ವವೇನು ?

ಈ ಬ್ರಹ್ಮಾಂಡಕ್ಕೂ ಮನುಷ್ಯನಿಗೂ ನಡುವೆ ಇರೋ ಆ ರಹಸ್ಯಮಯ ನಿಗೂಢವೇನು ಅನ್ನೋದನ್ನ ಅಕ್ಕಮಹಾದೇವಿಯವರು ತಿಳಿಸಿದ್ದಾರೆ. ವೇದಗಳ ಪ್ರಕಾರ ನೂರಾ ಎಂಟು ಸಂಖ್ಯೆ ಇಡೀ ಬ್ರಹ್ಮಾಂಡವನ್ನು ಪ್ರತಿನಿಧಿಸುತ್ತದೆ ಹಾಗು ಹಿಂಬಾಲಿಸಿ ಹೋದಷ್ಟು ಬ್ರಹ್ಮಾಂಡದ ಅಸ್ತಿತ್ವವನ್ನ ಕೂಡ ವಿವರಿಸುತ್ತೆ. ಆಚರಣೆಗಳ ವಿಷಯಕ್ಕೆ ಬಂದರೆ ಭಾರತದಲ್ಲಿ ನೂರಾ ಎಂಟು ಪವಿತ್ರ ಕ್ಷೇತ್ರಗಳಿವೆ. ಜ್ಞಾನದ ವಿಷಯಕ್ಕೆ ಬಂದಲ್ಲಿ ನಾಲ್ಕು ವೇದಗಳ ಸಾರವನ್ನು ಹೊಂದಿದ ಉಪನಿಷತ್ತುಗಳ ಸಂಖ್ಯೆಯು 108ಇನ್ನು ಸೌರಮಂಡಲದ ಮೂಲಕವು ನೂರಾ ಎಂಟುರ ಮಹತ್ವವನ್ನು ತಿಳಿಯಬಹುದಾಗಿದ್ದು,

ಇನ್ನು ಮನುಷ್ಯನ ಹೊರಭಾಗಕ್ಕೆ ಕಾಣುವ ದೇಹಕ್ಕೂ ಒಳಗಿರುವ ಆತ್ಮಕ್ಕೂ ನೂರಾ ಎಂಟು ಯೂನಿಟ್ ಗಳಷ್ಟು ಅಂತರ ಇರೋಧನ್ನ ಋಷಿಮುನಿಯಾದ ಅಕ್ಕಮಹಾದೇವಿಯವರು ಕಂಡುಕೊಂಡಿದ್ದಾರೆ. ಆದ್ದರಿಂದಲೇ ಆತ್ಮಜ್ಞಾನ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸುವವರು ನೂರಾ ಎಂಟು ಮಣಿಗಳ ಮಾಲೆಯನ್ನು ಹಿಡಿದು ಜಪಿಸುತ್ತಾರೆ.ನೂರಾ ಎಂಟು ಮಣಿಗಳು ಮನುಷ್ಯ ಮೋಕ್ಷ ಸಾಧಿಸುವುದಕ್ಕೂ ಮುಂದಿನ ಹಂತವನ್ನ ಪ್ರತಿನಿಧಿಸುತ್ತೆ ಹಾಗು ನೂರಾ ಎಂಟು

ಮಣಿಗಳನ್ನು.ಹೊಂದಿದ ಮಾಲೆಯ ಮೂಲಕ ಜಪ ಮಾಡಿದ್ರೆ ಮನುಷ್ಯ ಆಂತರಿಕವಾಗಿ ಸದೃಢರಾಗಲು ಸಹಕಾರಿ

ಶಿವನ ಸ್ವರೂಪನಾದ ನಟರಾಜನ ನಾಟ್ಯ ಅಣುಗಳ ನರ್ತನಕ್ಕೆ ಸಾಮ್ಯತೆ ಇತ್ತು. ನಟರಾಜನ ನಾಟ್ಯ ಬಗ್ಗೆಯೂ ನೂರಾ ಎಂಟು ಆಗಿದೆ.ಆದ್ದರಿಂದಲೇ ಶಿವನನ್ನು ಪ್ರತಿನಿಧಿಸುವ ರುದ್ರಾಕ್ಷಿ ಮಾಲೆಯಲ್ಲಿ ರುದ್ರಾಕ್ಷಿಗಳು ಕೂಡ ನೂರಾ ಎಂಟು ಸಂಖ್ಯೆಯಲ್ಲಿದೆ. ವೈಜ್ಞಾನಿಕ ದೃಷ್ಟಿಯಿಂದ ಹಿಡಿದು ದೈವಿಕ ದೃಷ್ಟಿವರೆಗೂ ನೂರಾ ಎಂಟು ಸಂಖ್ಯೆ ಸನಾತನ ಧರ್ಮದೊಂದಿಗೆ ಅವಿನಾಭಾವ ನಂಟು ಹೊಂದಿದ್ದು, ಮಂಗಳಕರ ಸಂಖ್ಯೆ ಎಂಬ ನಂಬಿಕೆ ಇದೆ.ಇದಿಷ್ಟು ಬಹಳ ಪ್ರಮುಖವಾಗಿ ಸನಾತನ ಧರ್ಮದ ರಹಸ್ಯಗಳನ್ನ ಅಕ್ಕಮಹಾದೇವಿಯವರು ತಿಳಿಸಿದ್ದರೆ.

108 ದಿನ ಮಂಗಳಕರ ಸಂಖ್ಯೆ ಎಂದು ಪರಿಗಣಿಸಲಾಗಿದೆ. ಪ್ರಾಣಾಯಾಮದಲ್ಲಿ ಚಕ್ರಗಳನ್ನ ಸಾಮಾನ್ಯವಾಗಿ ನೂರಾ ಎಂಟು ಚಕ್ರಗಳಲ್ಲಿ ಪುನರಾವರ್ತಿಸಲಾಗುತ್ತದೆ ಮತ್ತು 12 ಭಂಗಿಗಳ ಒಂಬತ್ತು ಸುತ್ತುಗಳಲ್ಲಿ ಸೂರ್ಯ ನಮಸ್ಕಾರಗಳು ಸೇರಿ ಪೂರ್ಣಗೊಳ್ಳುತ್ತವೆ. ಅದನ್ನ ಗುಣಿಸಿದಾಗ 108ಕ್ಕೆ ಸೇರಿಸಲಾಗುತ್ತೆ.ಪುರಾತನ ಯೋಗಿಗಳು ಈ ಪವಿತ್ರ ಸಂಖ್ಯೆಯ ಅಭ್ಯಾಸಗಳನ್ನು ಪೂರ್ಣಗೊಳಿಸುವ ಮೂಲಕ ನಾವು ಸೃಷ್ಟಿಯ ಲಯಕ್ಕೆ ಹೊಂದಿಕೊಳ್ಳಬಹುದು ಎಂದು ನಂಬಿದ್ದರು. ನೂರಾ ಎಂಟು ಪ್ರಾಚೀನ ಜಗತ್ತಿನ ಆಧುನಿಕ ಜಗತ್ತಿಗೆ ಸಂಪರ್ಕಿಸುವನಿ ಕೂಡ ಸಂಖ್ಯೆ ಎಂದು ತೋರುತ್ತೆ. ಭೌತಿಕ ಕ್ಷೇತ್ರವನ್ನ ಆಧ್ಯಾತ್ಮಿಕ ಕ್ಷೇತ್ರಕ್ಕೆ.ಸಂಪರ್ಕಿಸಿದೆ.
ನಮ್ಮ ಜೀವನದಲ್ಲಿ ನೂರಾ ಎಂಟು ಸಂಖ್ಯೆ ಕಾಣಿಸಿಕೊಂಡಾಗ ನಾವು ಬಹುಕಾಲದಿಂದ ಬಯಸಿದ್ದ ಗುರಿ ಅಥವಾ ಸಾಧನೆಯನ್ನು ಸಾಧಿಸಲಿದ್ದೇವೆ ಎಂದು, ಸಂಖ್ಯೆ ನೂರಾ ಎಂಟು ವೈಯಕ್ತಿಕ ಸಂಖ್ಯೆಗಳು 1,0 , ಮತ್ತು ಎಂಟುಅನ್ನು ಒಳಗೊಂಡಿದೆ.

ಸಂಖ್ಯೆ ಒಂದು ಅಧಿಕಾರ ಮತ್ತು ನಾಯಕತ್ವವನ್ನ ಪ್ರತಿನಿಧಿಸುತ್ತೆ.ಇದು ಹೊಸ ಆರಂಭಗಳನ್ನ ಪ್ರತಿನಿಧಿಸುತ್ತೆ. ಪ್ರಗತಿಯ ಹೊಸ ಹಾದಿಯನ್ನ ಪ್ರಾರಂಭಿಸುತ್ತೆ ಸಂಖ್ಯೆ 01 ನಿಗೂಢವಾದತ್ತು. ಅದುಶೂನ್ಯತೆ ಮತ್ತು ಶಾಶ್ವತತೆಯ ಎರಡನ್ನು ಪ್ರತಿನಿಧಿಸುತ್ತದೆ.ಆದರೆ ಇತರ ಸಂಖ್ಯೆಗಳೊಂದಿಗೆ ಸಂಯೋಜಿಸಿದಾಗ ಅದು ಇತರ ಸಂಖ್ಯೆಗಳ ಕಂಪನದ ಪ್ರಭಾವವನ್ನ ವರ್ಣಿಸುತ್ತೆ.ಸಂಖ್ಯೆ, ಎಂಟು ಶಕ್ತಿ ಮತ್ತು ಪ್ರಭಾವ ಸಮೃದ್ಧಿ ಮತ್ತು ಸಾಧನೆ ಅಪೇಕ್ಷಿತ ಫಲಿತಾಂಶಗಳನ್ನು ಪ್ರಕಟಿಸುವಶಕ್ತಿಗೆ ಸಂಬಂಧಿಸಿದೆ. ಈ ಕಂಪನವು ನಮ್ಮ ಜೀವನದಲ್ಲಿ ಪ್ರಬಲವಾದಾಗ ನಾವು ಆಯ್ಕೆ ಮಾಡಿದ ಆಸಕ್ತಿಯ ಕ್ಷೇತ್ರದಲ್ಲಿ ಅಥವಾ ನಮ್ಮ ವೃತ್ತಿಪರ ಜೀವನದಲ್ಲಿ ಹೆಚ್ಚಿನ ಪ್ರಭಾವವನ್ನು ಬೀರುತ್ತರೆ. ಒಂದು ದೇವರು ಅಥವಾ ಸತ್ಯವನ್ನ ಸೂಚಿಸುತ್ತೆ. ಸೊನ್ನೆ ಆಧ್ಯಾತ್ಮಿಕ ಅಭ್ಯಾಸದಲ್ಲಿಶೂನ್ಯತೆ ಅಥವಾ ಸಂಪೂರ್ಣತೆಯನ್ನು ಸೂಚಿಸುತ್ತದೆ. ಮತ್ತು ಇದು ಅನಂತತೆ ಅಥವಾ ಶಾಶ್ವತತೆಯನ್ನ ಸೂಚಿಸುತ್ತೆ.

ಶ್ರೀಯಂತ್ರದಲ್ಲಿ ಮೂರು ಸಾಲುಗಳು ಛೇದಿಸುವ ಬಿಂದುಗಳು ಇವೆ.ಹೀಗೆ ಅಂತಹ ಐವತ್ತನಾಲ್ಕು ಬಿಂದುಗಳಿವೆ. ಪ್ರತಿಯೊಂದು ಬಿಂದು ಪುರುಷ ಮತ್ತು ಸ್ತ್ರೀಲಿಂಗ ಗುಣಗಳನ್ನು ಹೊಂದಿದೆ. ಇದು ಶಿವ ಮತ್ತು ಶಕ್ತಿಯನ್ನು ಪ್ರತಿನಿಧಿಸುತ್ತೆ.ಹೀಗೆ 54×2 ನುಡಿಸಿದಾಗ ನೂರಾ ಎಂಟು ಬರುತ್ತೆ. ಹೀಗೆ ಶ್ರೀಯಂತ್ರ ಮತ್ತು ಮಾನವನ ದೇಹವನ್ನ ವ್ಯಾಖ್ಯಾನಿಸುವ ನೂರಾ ಎಂಟು ಅಂಕಗಳಿವೆ. ಚಕ್ರಗಳು ಸೂಕ್ಷ್ಮ ನರನಾಡಿಗಳು ಅಥವಾ ನಾಡಿಗಳ ಬಿದ್ದುಗಳಾಗಿವೆ.ಹೃದಯ ಚಕ್ರವನ್ನು ರೂಪಿಸಲು ಒಟ್ಟು ನೂರಾ ಎಂಟು ನಾಡಿಗಳು ಕೊಡುತ್ತವೆ ಎಂದು ಹೇಳಲಾಗುತ್ತೆ. ಅವುಗಳಲ್ಲಿ ಒಂದು ಸುಷುಮ್ನಾ ನಾಡಿ ಕಿರೀಟ ಚಕ್ರಕ್ಕೆ ಸಂಪರ್ಕ ಹೊಂದಿದೆ. ಇದುವೇ ಸ್ವಯಂ ಸಾಕ್ಷಾತ್ಕಾರ.ಮಾರ್ಗವೆಂದು ಅಕ್ಕಮಹಾದೇವಿಯವರು ಹೇಳುತ್ತಾರೆ.

ನೂರಾ ಎಂಟು ರಲ್ಲಿ ಒಂದು ಸಂಖ್ಯೆಯು ದೈವಿಕ ಪ್ರಜ್ಞೆಯನ್ನ ಪ್ರತಿನಿಧಿಸುತ್ತೆ. ಶೂನ್ಯವು ಶೂನ್ಯ ಅಥವಾ ನಿರರ್ಥಕವನ್ನ ಸೂಚಿಸುತ್ತೆ.ಯಾಕಂದ್ರೆ ಈ ಭೂಮಿಯ ಮೇಲಿನ ಎಲ್ಲವೂ ಕಾಲಾತೀತ ಎಂದು ಸೂಚಿಸುತ್ತೆ. ಎಂಟು ಸೃಷ್ಠಿಯ

ಅನಂತತೆಯನ್ನ ಪ್ರತಿನಿಧಿಸುತ್ತೆ. ಇನ್ನು ಜ್ಯೋತಿಷ್ಯ ಶಾಸ್ತ್ರದಲ್ಲಿ ನೂರಾ ಎಂಟು ರ ಮಹತ್ವವನ್ನ ನೋಡೋದಾದ್ರೆ 12 ರಾಶಿ ಚಕ್ರಗಳು ಮತ್ತು ಒಂಬತ್ತು ಗ್ರಹಗಳಿವೆ ಅವುಗಳನ್ನ ಗುಣಿಸಿದಾಗ ನೂರಾ ಎಂಟು ಸಂಖ್ಯೆ ಬರುತ್ತೆ.

ದೇಹದ ಆಂತರಿಕ ಉಷ್ಣತೆಯ ನೂರಾ ಎಂಟು ಡಿಗ್ರಿ ಫ್ಯಾರನ್ಹೀಟ್ಗೆ ತಲುಪಿದಾಗ ದೇಹದಲ್ಲಿನ ಪ್ರಮುಖ ಅಂಗಗಳು ಸ್ಥಗಿತಗೊಳ್ಳಲು ಪ್ರಾರಂಭಿಸುತ್ತವೆ.ಭಾರತದಾದ್ಯಂತ ನಿಖರವಾಗಿ ನೂರಾ ಎಂಟು ಪವಿತ್ರ ತಾಣಗಳಿವೆ. ಅದನ್ನ ಪಿ ತಾಸ್ ಎಂದು ಕರೀತಾರೆ. ಆಯುರ್ವೇದಕ್ಕೆ ಸಂಬಂಧಿಸಿದಂತೆ ನೂರಾ ಎಂಟು ಮರ್ಮಗಳಿವೆ.

15) ಒಂದು ರತ್ನವು ತಾನು ಮುಂದೆ ಈರಾರಾಗಿ
ಕುಂದ ದ್ವೆವತ್ತು ತೆರನಾದ | ರತ್ನವು
ಸಂದಿತು ಎನ್ನ ಮನದೊಳಗೆ

ಅಕ್ಕನವರು ತನ್ನ ಸಾಧನೆಯ ಮೂಲಕ ಮೇಲಿರುವಂತಹ ಅನುಭವಗಳನ್ನು ತಿಳಿಸಿದ್ದರೆ. ಅದನ್ನ ಬಿಡಿಸಿ ಬಿಡಿಸಿ ಮತ್ತೆ ಮತ್ತೆ.ಅಕ್ಕಮಹಾದೇವಿ ತಾಯಿಯವರು ನಮಗೆ ಇಲ್ಲಿ ಸ್ಪಷ್ಟಪಡಿಸಿದ್ದಾರೆ.ಈ ಜಗತ್ತಿನಲ್ಲಿರುವುದು ಒಂದೇ ಒಂದು ವಸ್ತು ನಿಜ ವಸ್ತು. ಅದೇ ಪರಮಾತ್ಮ. ಅಂತಹ ನಿಜ ವಸ್ತು ಒಂದೇ ಇದ್ದು, ಭೌತಿಕ ವಸ್ತುಗಳ ಹೊದಿಕೆಯನ್ನು ಪಡೆದು ಆತ್ಮವಾಗಿದೆ.ಇದು ಪಂಚಭೂತಗಳನ್ನು ಸೇರಿ ಒಂದು ಆತ್ಮವಾಗಿ ಜೀವಾತ್ಮನಾಗಿ ಇಲ್ಲಿಗೆ ಬಂದು ಸೇರುತ್ತದೆ. ಆ ಜೀವಾತ್ಮನು ಆ ಪರಮಾತ್ಮನ ನಿಜ ವಸ್ತುವಿನ ಸೇವೆಯಲ್ಲಿ ಅಂತಹ ಆತ್ಮವಾಗಿ ಪರತ್ನವು.ಗುರುವಿನ ಕರುಣೆಯಿಂದ ದೀಕ್ಷೆ ಪಡೆದುಕೊಂಡಾಗ ಅದು ಸಾಧನೆಯಿಂದ ದಿವ್ಯರತ್ನವಾಗುತ್ತದೆ.
ಆದರೆ ಆ ದಿವ್ಯರತ್ನವಾಗಿ ಲೀಲೆಯಿಂದ ಎರಡಾಗಿ ಅಂಗಲಿಂಗ ಎರಡು ಆಗಿರುತ್ತದೆ ಅದು ಮುಂದೆ ಹನ್ನೆರಡ ಆಗಿ ಮಾರ್ಪಡುತ್ತದೆ. ಈರಾರಾಗಿ ಹನ್ನೆರಡ ಆಗಿ ಮಾರ್ಪಡುತ್ತದೆ ಅಂದ್ರೆ ಸುಜ್ಞಾನ ಸಾಧನೆಯ ಬಲದಿಂದ 12 ಸೂರ್ಯನ ಬೆಳಕಿನ ಪ್ರಕಾಶ ಮಯವಾದಂತಹ ರತ್ನವು ಮುಂದೆ ಸಾಧನೆ ಮೂಲಕ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸಿ ಒಂದೊಂದು ಚಕ್ರವನ್ನ ಆ ಕುಂಡಲಿನಿ ಶಕ್ತಿಯ ಮೇಲೆರುತ್ತ ಚಕ್ರವನ್ನು ಬಳಸುತ್ತ. ಲಿಂಗಾಕಾರವಾಗಿ ಗ ಕಾರವಾಗಿ ಯ,ಕಾರವಾಗಿ ನಕಾರವಾಗಿ, ಮಕರವಾಗಿ, ಓಂಕಾರವಾಗಿ ಹೀಗೆ ಇವೆಲ್ಲವನ್ನ ದಾಟಿ ಓಂಕಾರದ ಮೂಲಕ ಸಹಸ್ರಾರ ಚಕ್ರವನ್ನು ಮುಟ್ಟಬೇಕು ಅದು.ಅಂದ್ರೆ ಆರು ಚಕ್ರಗಳನ್ನು ಬೇಧಿಸುವಂತಹ ಒಂದು ಕ್ರಮ. ನಂತರ ಸಹಸ್ರಾರಕ್ಕೆ ಮುಟ್ಟುವಂತಹ ಕ್ರಮವನ್ನು ಇಲ್ಲಿ ಹೇಳಲಾಗ್ತಾ ಇದೆ. ನಂತರ ಅಂಗ ಲಿಂಗ ಎರಡಾಗಿ ಎರಡರಲ್ಲಿ ಆರಾಗಿ ಅವುಗಳಲ್ಲಿ ಪ್ರಭೇದಗಳಾಗಿ 50 ಆಗುತ್ತದೆ.

ಆಗುತ್ತದೆ ಅನ್ನುವಂತಹ ಮಾತು ಇದು.ಸಾಧನೆಯ ಉನ್ನತವಾದಂತಹ ಸ್ಥಿತಿ. ಅದರಿಂದ ಅದರ ಬಗ್ಗೆ ನಾನು ಹೆಚ್ಚು ಹೇಳೋಕೆ ಇಷ್ಟ ಪಡುವುದಿಲ್ಲ. ಸಾಧನ ಸಾಧಕರು ಹೆಚ್ಚು ತಿಳ್ಕೊಬೇಕು, ಅದನ್ನ ಅಭ್ಯಾಸ ಮಾಡಬೇಕಾಗುತ್ತದೆ.ಹೀಗೆ ಈ 50 ತೆರನಾ ಆದಂತಹ ರತ್ನ.ಕುಂದದ ಐವತ್ತು ತೆರನಾದದಂತಹ ರತ್ನವು ಸಂದಿತ್ತು ಎನ್ನ ಮನದೊಳಗೆ ಅಂದ್ರೆ ಅಷ್ಟೊಂದು ಪ್ರಕಾಶಮಯವಾಗಿ ಬೆಳಗುವಂತಹ ದಿವ್ಯ ಪ್ರಕಾಶ. ಅಲ್ಲದೆ ಒಂದೊಂದು ಚಕ್ರಕ್ಕೆ ಒಂದೊಂದು ಲಿಂಗಗಳು ಆಧಾರ ಚಕ್ರ ನಮ್ಮ ಶರೀರದಲ್ಲಿ ಬರುತ್ತದೆ. ಮೂಲಾಧಾರ ಚಕ್ರದಲ್ಲಿ ಆಚಾರಲಿಂಗ ಇದೆ.ಈ ಆಚಾರಲಿಂಗವು ನಾಲ್ಕು ಎಸಳುಗಳ ತಾವರೆಯಿಂದ ಕೂಡಿದೆ. ಹೀಗೆ ಈ ನಾಲ್ಕು ದಳಗಳಿಂದ ಕೂಡಿದೆ. ಆತವರಿ ನಂತರ ಎರಡನೆಯದಾಗಿ ಲಿಂಗ ಸ್ಥಾನ ಅಂದ್ರೆ ಸ್ವಾಧಿಷ್ಠಾನ ಚಕ್ರ ಇಲ್ಲಿ ಆರು ಎಸಳಿನ ತಾವರ ಇದೆ.ಆರು ಎಸಳಿನ ತಾವರಿ. ನಂತರ ನಾಭಿ ಸ್ಥಾನದಲ್ಲಿ ಮಣಿಪೂರಕಚಕ್ರ ಇದೆ. ಸಾಧಕನ ನಾವಿ ಸ್ಥಾನದಲ್ಲಿ

ಮಣಿಪೂರಕಚಕ್ರ ಇಲ್ಲಿ ಅಗ್ನಿಯೇ ಮಹಾಭೂತ ಇದು ಅಗ್ನಿ ಸ್ಥಾನವನ್ನ ಒಳಗೊಂಡಿದೆ.

ಈ ಅಗ್ನಿ ಸ್ಥಾನವನ್ನು ಒಳಗೊಂಡಿರುವಂತಹ ಮಣಿಪೂರಕಚಕ್ರ ಹತ್ತು ತಾವರೆಯಿಂದ ಕೂಡಿದೆ. ನಂತರ ಹೃದಯಸ್ಥಾನದಲ್ಲಿ ಅನಾಹತ ಚಕ್ರ ಇಲ್ಲಿ ವಾಯುವೆಂಬ ಮಹಾಭೂತ ಇದೆ. ಈ ಹೃದಯ ಸ್ಥಾನದಲ್ಲಿರುವ ಅನಾಹುತ ಚಕ್ರ.ಇಲ್ಲಿ 12 ಎಸಳಿನ ತಾವರೆಯನ್ನು ಒಳಗೊಂಡಿದೆ.ಇದು ಸೂರ್ಯ ಪ್ರಕಾಶದಿಂದ ಕೂಡಿದ್ದು 12 ಎಸಳಿನ ತಾವರೆ ಇಲ್ಲಿದೆ. ನಂತರ ಕಂಠ ಸ್ಥಾನದಲ್ಲಿ ವಿಶುದ್ಧಿ ಚಕ್ರ ಇಲ್ಲಿ ಆಕಾಶವೇ ಮಹಾಭೂತ.ಇದು 16 ಎಸಳಿನ ತಾವರೆಯಿಂದ ಕೂಡಿದೆ. ಹಾಗೆ ಭ್ರುಮಧ್ಯದಲ್ಲಿ ಅನಾಹತ ಚಕ್ರ. ಮನವೆಂಬ ಮಹಾಭೂತ ಇಲ್ಲಿರುವಂತಹದ್ದು. ಇದು ಎರಡು ಎಸಳಿನ ತಾವರೆಯಿಂದ ಕೂಡಿದೆ. ಎರಡು ಎಸಳಿನ ತಾವರೆ ಹಂ ಸಂ.ಎರಡು ಎಸಳಿನ ತಾವರೆಯಿಂದ ಕೂಡಿದೆ. ನಂತರ ಬ್ರಹ್ಮರಂಧ್ರ ಅಂದ್ರೆ ಸಹಸ್ರಾರ ಚಕ್ರ ನೆತ್ತಿಯ ಭಾಗದಲ್ಲಿದ್ದು ಬರ್ತಾ ಇದೆ.ಇಲ್ಲಿ ಚಂದ್ರ ಎಂಬ ಮಹಾಭೂತ ಸಾವಿರ ಎಸಳಿನ ಮಧ್ಯದಲ್ಲಿ ಮಹಾಜ್ಯೋತಿ ವರ್ಣದ ಲಿಂಗ ಇಲ್ಲಿರುತ್ತದೆ ನಿರಾಮಯವಾಗಿರುತ್ತದೆ. ಈ ಲಿಂಗ.ಇದಕ್ಕೆ ಬೀಜಾಕ್ಷರವೇ ಪ್ರಣವನಾದ.ಅಂದರೆ ಓಂಕಾರ. ಇದು ನೂರಾ ಆರು ಎಸಳುಗಳಿಂದ ಕೂಡಿರುತ್ತದೆ. ನೂರಾರು ಸ್ಥಲಗಳಿಂದ ಕೂಡಿರುತ್ತದೆ.ಹೀಗೆ ಇವೆಲ್ಲ ಚಕ್ರಗಳನ್ನ ಒಂದೊಂದು ಲಿಂಗಗಳು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ.ಶೂನ್ಯಲಿಂಗ ಹೀಗೆ ಸಾಧಕನು ಈ ಹಂತವನ್ನ ಏರ್ತಾ ಏರ್ತಾ ಏರ್ತಾ ಹೋದಾಗ ಸಾಧಕರಿಗೆ ಆನಂದವಾದಂತಹ ಅನುಭೂತಿಯಾಗುತ್ತದೆ. ಸಾಧಕನಿಗೆ ಬಹಳಷ್ಟು ಆನಂದವಾಗುತ್ತದೆ.ಜಗನ್ಮಾತೆ ಅಕ್ಕಮಹಾದೇವಿಯವರು ಈ ಅನುಭವವನ್ನು ಅನುಭವಿಸಿದ್ದಾರೆ. ದಿವ್ಯ ಪ್ರಕಾಶದ ಬೆಳಗಿನಲ್ಲಿ ಸವಿಯನ್ನು ಉಂಡಿದ್ದಾರೆ.ಇಂತಹ ಲಿಂಗವು ಪರಿಶುದ್ಧವಾದ ಅರಿವಿನಲ್ಲಿ ಲೀನವಾಗಿ ತಾನು ಇಲ್ಲದಂತಾಗಿ ಶಾಂತ ಸ್ಥಿತಿ ಒಂದುಯಲ್ಲಿ ಉಳಿಯುತ್ತದೆ. ಇನ್ನು ಉಳಿಯುತ್ತಿಲ್ಲ. ಶಾಂತತೀತ ಸ್ಥಿತಿಯಲ್ಲಿ ಉಳಿಯುತ್ತದೆ.ಇಂತಹ ಲಿಂಗವು ನನ್ನ ಮನದೊಳಗೆ ಅಂದ್ರೆ ನನ್ನ ಹೃದಯದೊಳಗೆ ಸಂದಿತ್ತು ಅಂದ್ರೆ ಒಂದಾಯಿತು ಅಂತ ಹೇಳ್ತಾ ಇದ್ದಾರೆ. ಇಷ್ಟೊಂದು ಸಂತೋಷದಾಯಕವಾದಂತಹ ಈ ಸೊಬಗ ಅನ್ನ ಸ್ವಾರಸ್ಯವನ್ನ ಅಕ್ಕಮಹಾದೇವಿ ತಾಯಿಯವರು ಯೋಗಾಂಗ ತ್ರಿವಿಧಿಯಲ್ಲಿ ತಮ್ಮ ಸಾಧನೆಯ ಹಂತವನ್ನ. ಇಲ್ಲಿ ತಿಳಿಸುತ್ತಿದ್ದಾರೆ.

ಒಂದು ರತ್ನ.ಅನಾಹತ ನಾದದಿಂದ ಬರುವಂತಹ ಒಂದು ಧ್ವನಿ.ಆ ಧ್ವನಿ ಮಾತೆಂಬ ಜ್ಯೋತಿರ್ಲಿಂಗ ತಾಲೋಟ ಸಂಪುಟ ವೆಂಬ ವೈಬ್ರೇಶನ್ ಗೆ ತುತ್ತಾದಾಗ.ಅದು ಓಂ ತನ್ನವಂತದ್ದು ನಾವು ಉಸಿರಾಡುವಾಗ ಉಸಿರನ್ನ ಎಳೆದುಕೊಳ್ಳಬೇಕಾದರೆ ಸಹ ಸ ಅನುವಂತ ಶಬ್ದ ಬರುತ್ತೆ. ಉಸಿರು ಬಿಡುವಾಗ ಹಂ ಅಂತ ಬಿಡುತ್ತೆವೆ ಇವೆರಡು ಸೇರಿದ್ದು ಸೋಹಂ. ಇದು.ಅವರೋಣ ಕ್ರಿಯೇ ಇದನ್ನ ಮೇಲು ಮುಖ ಮಾಡಿದಾಗ ಅದನ್ನು ಉಲ್ಟಾ ಮಾಡಿದಾಗ ಹಂಸ ,ಸೋಹಂ ಆಗುತ್ತೆ.

ಗಮನದಲ್ಲಿಟ್ಟುಕೊಂಡು ಈ ಮೂಲವಾಗಿ ಇರತಕ್ಕಂತ ಹಂಸದ ನೆಲೆ ಇದೇಯಲ್ಲ ಆಕಡೆ ಸ ತಗಿರಿ ಇಕಡೆ. ಹ ತಗಿರಿ ಇವೆರಡನ್ನೂ ಬೆರೆಸಿದಾಗ ಓಂ ಅನ್ನುವಂತಹ ಶಬ್ದ ಬರುತ್ತೆ.ಸ ಬಿಟ್ಟಾಗಲೂ ಓಂ ಅನ್ನುವ ಶಬ್ದ ಬರುತ್ತೆ.ಹಾಂ ಬಿಟ್ಟಾಗ ಸೊನ್ನೆ ನಿಸರ್ಗದ ಅನುಸಾರ ಬರುತ್ತೆ. ಎರಡು ಸೇರಿ ಒಂದು ಆಗುತ್ತೆ. ಇದು ಶಬ್ದದ ನಿರ್ಲಿಪ್ತವಾಗಿ ಇರತಕ್ಕಂತ ನಿಜಾನುಭವ ಶಕ್ತ.ಅದನ್ನ ನಾವು ಬಿಡಿಸಿದಾಗ ಅದು ಮೂರು ಆಗುತ್ತೆ ಆ ಉ ಮಾ ಅಂತ ಆಗುತ್ತದೆ. ಅದು ಹಾಗೆಯೇ ಸ್ವರಾಕ್ಷರಗಳಲ್ಲಿ ಅದು ಸೇರಿ ಅದು 12 ಸ್ವರಗಳ ಆಗುತ್ತದೆ.

ಒಂದು ರತ್ನವು ತಾನು ಮುಂದೆ ಈ ರಾರಾಗಿ ಮುಂದೆ ವ್ಯಂಜನಗಳೆಲ್ಲ ಸೇರಿಕೊಂಡು 50 ಅಕ್ಷರಗಳು ಇಡೀ ವ್ಯವಸ್ಥೆಯನ್ನೆಲ್ಲ ಸೃಷ್ಟಿ ಮಾಡತಕ್ಕಂತ ಸಕಾರಾತ್ಮಕವಾಗಿ ನಮಗೆ ನಾವು ಹೇಳುವಂತಹ ಕೇಳುವಂತಹ ವಿಷಯ ನಿರೂಪಣೆ ಮಾಡುವಂತ ಎಲ್ಲ ಅಕ್ಷರಗಳು 50 ಅಕ್ಷರಗಳಲ್ಲಿ ಮೂಡಿ ಬಂತು. ಇದನ್ನ ಏನು ಮಾಡಿದೆ ಈ ಅಕ್ಷರಗಳು ಅನ್ನುಅಂತ ಈ ರತ್ನಗಳನ್ನು ಬಂದವು. ಇವನ್ನ ನನ್ನ ಹೃದಯದೊಳಗೆ ಅದನ್ನ

ನಾನು ಅರ್ಥ ಮಾಡಿಕೊಂಡೆ ಅಕ್ಷರ ಅನ್ನವ ಶಬ್ದ ಇದ್ಯಲ್ಲ. ಇದು ನಮ್ಮ ಭಾಷೆಯಲ್ಲಿ ಎಷ್ಟು ಅದ್ಭುತವಾದ ಅರ್ಥ ಇದೆ ನೋಡಿ.ಇಂಗ್ಲೆಂಡ್ ನಲ್ಲಿ ಆಲ್ಫೆಬೆಟ್ಸ್ ಅಂತೀವಿ ಅದಕ್ಕೆ ಏನು ಅರ್ಥ ಇಲ್ಲ ಶಬ್ದಕ್ಕೆ.ಆದರೆ ನಮ್ಮಲ್ಲಿ ಅಕ್ಷರ ಅಂತ ಹೇಳುತ್ತೇವಲ್ಲ.ನಾಶವಿಲ್ಲದ್ದು ಕ್ಷರ ಅಂದ್ರೆ ನಾಶ, ಅಕ್ಷರ ಅಂದ್ರೆ ನಾಶವಿಲ್ಲದ್ದು.ಈ ಅಕ್ಷರಕ್ಕೆ ನಾಶನೆ ಇಲ್ಲ.ಈ ಅಕ್ಷರ ಅನ್ನೋದನ್ನ ನಾವು ಯಾವ ರೀತಿ ಗಮನಿಸುತ್ತೆವೆ? ಒಂದು ಉದಾಹರಣೆಗಾಗಿ.

ಬಾಲ್ಯದಲ್ಲಿ ಮೊದಲು ನಾವು ಅಕ್ಷರ ಕಲಿತವೆ.ಅಕ್ಷರ ಕಲಿತ ಮಗು ಗೋಡೆ , ನೆಲದ ಮೇಲೆಲ್ಲಾ ಬರೆಯುತ್ತೆ. ನಾನು ಬರೆಯಬಲ್ಲೆ. ನಾನು ಓದಬಲ್ಲೆ , ಅಕ್ಷರಗಳನ್ನ ಒಂದೊಂದಾಗಿ ಅಕ್ಷರಗಳನ್ನು ಅ,ಆ,ಇ,ಈ ಗುರುತಿಸುತ್ತದೆ.ಅದೇ ಅಕ್ಷರಗಳು ಎರಡು ಜೋಡಿ ಪದವನ್ನು ಹೇಳಿಕೊಡುತ್ತದೆ. ಪದಗಳು ಸೇರಿ ವಾಕ್ಯ ಆಗುತ್ತೆ. ವಾಕ್ಯಗಳು ಸೇರಿ ಗ್ರಂಥ ಆಗುತ್ತೆ, ಕವನ ಆಗುತ್ತೆ, ಇತಿಹಾಸವಾಗುತ್ತದೆ.

ಈ ಎಲ್ಲವನ್ನು ಅಕ್ಷರ ಮಾಧ್ಯಮದಿಂದ ಕಲಿಯುತ್ತೆವೆ.ಈಗ ಒಂದು ಆಲೋಚನೆ ಮಾಡಿ, ನೀನ್ನೆ ನಾವು ಏನೋ ಒಂದು ಬರೆದು , ಹತ್ತುಸಾಲು ಅರ್ಥವಾ ಅರ್ಧ ಪುಟ, ನಮ್ಮ ಸ್ವಂತ ವಿಚಾರವನ್ನು ನಾವು ಏನು ಬರೆದಿದ್ದೆವೆ ಎಂದು ಮೂರುದಿನ ಬಿಟ್ಟು ಅದನ್ನ ಆಗೆ ಇದ್ದಹಾಗೆ ಮತ್ತೆ ಬರೆಯುವುದು ಆಗುವುದಿಲ್ಲ ಅದೇ ರೀತಿಯಾಗಿ ಆಗುವುದಿಲ್ಲ, ಎರಡು ಮೂರು ದಿನದ ಹಿಂದೆ ಬರೆದ ವಿಷಯ ನೆನಪು ಇರುವುದಿಲ್ಲ.ಆಗದರೆ ಬಾಲ್ಯದಲ್ಲಿ ಕಲಿತ ಅಕ್ಷರ ನಾವು ಮರೆಯುವುದಿಲ್ಲ ಇದನ್ನೇ ಹೇಳೊದು ನಾಶವಿಲ್ಲದ್ದು ಅದೇ ಕಾರಣದಿಂದ ಅಕ್ಷರ ಇನ್ನೇಲ್ಲ ಬಿಟ್ಟು ಹೋಗುತ್ತದೆ ಮೂಲ ಆಧಾರವನ್ನು ಇಟ್ಟುಕೊಂಡು ಲಿಂಗನು ಸಂಧನ ಮುಖಾಂತರವಾಗಿ ಅನುಭವಾದ ಎತ್ತರದ ಆನಂದವನ್ನು ತಿಳಿದುಕೊಳ್ಳುವದಕ್ಕೆ ಅವಕಾಶ ಇರಬೇಕು ಇಂಥ ಒಂದು ರತ್ನ ನನ್ನ ಮನದಲ್ಲಿ ನಿಂದಿತ್ತು.

16) ಊರೊಳಗಾಡುವ ಮಾರಿಯ ಹಿಡಿತಂದು
ಭಾರಿಯ ಕೋಳ ಅಳವಡಿಸಿ | ಆ ಪುರವ
ಮಾರಿದೆನು ಒಬ್ಬ ಚದುರಂಗೆ

ನನ್ನ ಶರೀರ ಅನ್ನುವುದು ಒಂದು ಊರು ಆ ಊರಿನಲ್ಲಿ ಒಬ್ಬ ಮಾರಿ ಅಂದ್ರೆ ಅಹಂ ಮಮಾಕಾರಗಳನ್ನು ಇಂಬಿಟ್ಟು ಕೊಂಡಿ ರತಕ್ಕಂತಹ ಈ ಮಾರಿ ಎಲ್ಲಕಡೆ ಓಡಾಡಿಕೊಂಡಿದ್ದ ನನ್ನ ಅಹಂಕಾರ ದುರಹಂಕಾರ ವ್ಯವಸ್ಥೆ ದುಃಖ ಇವುಗಳನ್ನು ಬೆಳಸುತ್ತ ಕುಳಿತಿರುವಂತಹ ಸನ್ನಿವೇಶ ನಾವು ನೋಡುತ್ತೇವೆ.ಇದನ್ನ ಹಿಡಿದು ತಂದೆ ಅದಕ್ಕೆ ನನ್ನ ಸಂಕಲ್ಪಶಕ್ತಿ ನನ್ನ ಸಾಧನೆ ಮತ್ತು ನಿಚ್ಚಯ ಜ್ಞಾನ ಕೊಳಗಳನ್ನ ಹಾಕಿ ಕಟ್ಟಿಹಾಕಿದೆ.ಕಟ್ಟಿಹಾಕಿ ಏನುಮಾಡಿದೆ ನಾನು ಅಂದ್ರೆ ಆ ಪುರವನ್ನು ಈ ಶರೀರ ಅನ್ನುವಂತ ಊರನ್ನ ನಾನು ಒಬ್ಬ ಚದುರಂಗೆ ಆ ಪರಮಾತ್ಮನಿಗೆ ನಾನು ಮಾರಿಬಿಟ್ಟೆ.ಈ ಶರೀರವನ್ನು ಸಂಪೂರ್ಣವಾಗಿ ಅದನ್ನ ತೇಗೆದು ಮಾರಿಬಿಡ ಬೇಕು ಯಾರಿಗೆ ಮಾರಬೇಕು ಲಿಂಗಕ್ಕೆ ಕೊಟ್ಟುಬಿಡಬೇಕು.ಈ ಅಂಗವನ್ನು ಲಿಂಗಕ್ಕೆ ಕೊಟ್ಟಗಾ ಏನಾಗುತ್ತದೆ ಅಂಗಕರಣಂಗಳು, ಮನಸ್ಸು, ಬುದ್ದಿ ಚಿತ್ತ ಅಹಂಕಾರ ಇವೇಲ್ಲವು ಲಿಂಗ ಕಿರಣ ಗಳಾಗಿ ಪರಿವರ್ತನೆಯಾಗಿ ಬಿಡುತ್ತದೆ.ಊರೊಳಗೆ ಆಡುವ ಮಾರಿ ಅಂದ್ರೆ ಹಲವು ಹವ್ಯಾಸಗಳಲ್ಲಿ ತಿರುಗುತ್ತ ಇರುವಂತಹ ಈಮನಸ್ಸು.ಊರು ಅಂದ್ರೆ ಈ ಶರೀರ.ಈ ನಮ್ಮ ಶರೀರವೆಂಬ ಊರಿನಲ್ಲಿ ಒಂದು ಮಾರಿ ಆಡ್ತಾ ಇದೆ. ಅದೇ ಮನಸ್ಸೆಂಬ ಮಾರಿ ಕೊಳವೆಂದರೆ ದೇವನ ನೆನವು.ಆಳವಡಿಸುವುದೆಂದರೆ ನಿಗ್ರಹ ನಿಯಂತ್ರಣ.ನೋಡಿ ಚದುರ ಎಂದರೆ ಪರಮಾತ್ಮ. ಹಲವಾರು ವಿಷಯಗಳಲ್ಲಿ ಹರಿಯುತ್ತಿರುವಂತಹ ಮನವು ಮಾರಿಯನ್ನು ನಿಯಂತ್ರಿಸಿ.ದೇವನೆಂಬ.ಕೊಳವನ್ನ ಅದಕ್ಕೆ ತೊಡಿಸಬೇಕು. ಶರೀರದಲ್ಲಿ ಇರುವಂತಹ ಈ ಮನಸ್ಸು ಸೂಕ್ಷ್ಮಾತಿಸೂಕ್ಷ್ಮದಲ್ಲಿರುವಂತಹ ಈ ಮನಸ್ಸು ಏನೆಲ್ಲ ಮಾಡುತ್ತದೆ. ಮನುಷ್ಯನನ್ನು ಹಾಳು ಮಾಡುತ್ತ.

ಅದೆಲ್ಲೂ ಕರ್ಕೊಂಡು ಹೋಗ್ತಿದೆ.ನೋಡಬಾರದ್ದೆನ್ನೆಲ್ಲ ನೋಡ್ತಾ ಇದ್ದೆ ಕೇಳಬಾರದು, ನ್ನೆಲ್ಲ ಕೇಳುತ್ತದೆ, ಮಾತನ್ನ ಆಡಬಾರದು ಎಲ್ಲ ಮಾತನಾಡುತ್ತದೆ .ಇದು ಮನುಷ್ಯನ ಬದುಕನ್ನೇ ಸರ್ವನಾಶ ಮಾಡುತ್ತದೆ. ಚಂಚಲವಾದ ಮನಸ್ಸು ಆದ್ದರಿಂದ ಆ ಮನಸ್ಸಿನ ಇಂತಹ.ಅನೇಕ ವಿಚಾರಗಳನ್ನ ನಿಯಂತ್ರಣ ಮಾಡಬೇಕು. ಕೆಟ್ಟ ವಿಚಾರಗಳನ್ನು ನಿಯಂತ್ರಣ ಮಾಡಬೇಕು.

ನಿಯಂತ್ರಣಮಾಡಬೇಕಾದರೆ ದೇವನ ನೆನವು ಎಂಬ ಕೋಳವನ್ನ ಅದಕ್ಕೆ ತೊಡಿಸಬೇಕು. ಸುಮ್ನಿರೋದಿಲ್ಲ. ಮನಸ್ಸು ನೀವು ಏನಾದ್ರೂ ಮಾಡ್ತಾ ಇದೆ.ಅದು ಎಲ್ಲಿ ಹೋಗುತ್ತದೆ, ಏನು ಮಾಡ್ತಾನೆ ಇರುತ್ತದೆ. ಆದ್ದರಿಂದ ಅದು ಸುಮ್ಮನಿರಬೇಕು ಅಂದ್ರೆ ಏನು ಮಾಡಬೇಕು? ಮಂತ್ರ ಜಪ ಎಂಬ ಕೊಳವನ್ನು ಅದಕ್ಕೆ ತೊಡಿಸಬೇಕು.ದೇವನ ನೆನಹು ಮಂತ್ರ ಎಂಬಂತಹ ಕೊಳವನ್ನು ಅದಕ್ಕೆ ತೊಡಿಸಬೇಕು.

ಹೀಗೆ ತೊಡಿಸಿದಂತಹ ಈ ದೇಹವೆಂಬ ಪುರವನ್ನ ಮನಸ್ಸು ಸಹಿತವಾಗಿ ದೇವರಿಗೆ ಏಡೆ ಮಾಡಲಾಗುತ್ತದೆ ಏನಾಗುತ್ತದೆ? ಮಂತ್ರಜಪವನ್ನು ಮಾಡ್ತಾ ಮಾಡ್ತಾ ಹೋದಾಗ ದೇಹದ ಜೊತೆಗೆನೇ ಪರಮಾತ್ಮನಿಗೆ ಏಡೆ ಆಗುತ್ತದೆ. ಜೀವನದಲ್ಲಿ ಸಂಕಲ್ಪ ಮಾಡ್ತೀವಿ. ಅದನ್ನು ಮಾಡಬೇಕು. ಇದನ್ನು ಮಾಡಬೇಕು ಅಂತ ಆಮೇಲೆ ವಿಕಲ್ಪನ್ನು ಆಗುತ್ತದೆ.ಏನು ಮಾಡಲಾರದೆ ಕೆಟ್ಟ ಕೆಟ್ಟ ಕಾರ್ಯಗಳ ಕಡೆಗೆ ಮನಸ್ಸು ಹೋಗುತ್ತದೆ.ಕೆಟ್ಟ ಆಲೋಚನೆ ಬರುತ್ತದೆ. ಅದುವಿಕಲ್ಪ ಆಗುತ್ತದೆ.ಇದು ಸಂಕಲ್ಪ ಆಗುತ್ತದೆ. ಒಳ್ಳೆದಾಗುತ್ತದೆ. ಆದ್ದರಿಂದ ಸಂಕಲ್ಪ ವಿಕಲ್ಪ ಇವೆರಡು ಮನಸ್ಸಿನಿಂದ ಅಳಿಸಬೇಕು.ಸಂಕಲ್ಪ ತೊಟ್ಟಾಗ ಒಂದು ರೀತಿ ಆಗುತ್ತದೆ. ವಿಕಲ್ಪ ತೊಟ್ಟಾಗ ಒಂದು ರೀತಿ ಆಗುತ್ತದೆ. ಆದರೆ ಎರಡು ಒಳಗೊಂಡಾಗ ಅದು ಮನಸ್ಸು ಸಂಕಲ್ಪ ವಿಕಲ್ಪವನ್ನು ಒಳಗೊಂಡಿತ್ತು ಅಂತ ಹೀಗೆ ಸಂಕಲ್ಪ ವಿಕಲ್ಪ ಎರಡು ಒಲಿದಾಗ ಏನಾಗುತ್ತದೆ?ಶಾಂತ ಸ್ಥಿತಿಗೆ ಮನಸ್ಸು ಬರುತ್ತದೆ.

ಜಗನ್ಮಾತೆ ಅವರು ಊರೊಳಗೆ ಆಡುವ ಮಾರಿಯನ್ನು ಹಿಡಿದು ತಂದು ಬಾರಿ ಕೊಳವನ್ನು ಅಳವಡಿಸಿ ಆ ಊರ ಮಾರಿದನು. ಒಬ್ಬ ಚದುರಂಗಿ ಈ ಊರನ್ನ ಅಂದ್ರೆ ಈ ದೇಹವನ್ನ ಮನಸ್ಸಿಗೆ ಬಾರಿ ಕೊಳವನ್ನು ತೊಡಿಸಿ ಬಿಟ್ಟು ಈ ಊರಿನ ದೇಹವೆಂಬ ಊರನ್ನ ಚದುರಂಗ ಮಾರಿಬಿಟ್ಟರಂತೆ.ಎಂತಹ ಚದುರ ಪರಮಾತ್ಮನಿಗೆ ಈ ದೇಹವನ್ನ ಎಡೆ ಮಾಡಿ ಬಿಟ್ಟೆ. ಆದ್ದರಿಂದ ತನು ಮನವು ಭಾವವು ಎಲ್ಲ ಪರಮಾತ್ಮನಿಗೆ ಎಡೆಯಾಗಿದೆ ಎಂಬಂತಹ ಮಾತನ್ನ ಇಲ್ಲಿ ವಿಶ್ವಜ್ಯೋತಿ ಅಕ್ಕಮಹಾದೇವಿತಾಯಿಯವರು ತಿಳಿಸಿದ್ದಾರೆ.ಬುದ್ಧಿ ಚಿತ್ತ ಅಹಂಕಾರ ಇವೆಲ್ಲವೂ ಸಹ ಲಿಂಗ ಕಿರಣಗಳಾಗಿ ಪರಿವರ್ತನೆಯಾಗುತ್ತದೆ. ನಾನು ಅಂತಹ ಪರಮಾತ್ಮನಿಗೆ ಅಂತಹ ಮಹಾ ಲಿಂಗಕ್ಕೆ ಅಂತಹ ಲಿಂಗಯ್ಯನಿಗೆ ನಾನು ಈ ಶರೀರವನ್ನ ಕೊಟ್ಟು ಬಿಟ್ಟೆ. ಮಾರಿಬಿಟ್ಟೆ.ಮಾರಿದಾಗ ಏನಾಯಿತು, ಅಲ್ಲಿಂದ ಮುಂದೆ ಆ ತಾಯಿ ಹೇಳ್ತಾರೆ.ಹೌದು ಈ ಸಾಧನೆಯನ್ನ ಮಾಡಿದ ಮೇಲೆ ಮುಂದೆ ಏನು ಮಾಡಬೇಕು?ಅದರ ಪರಿಣಾಮದಲ್ಲಿ ಏನಾಯ್ತು?ಈ ಪುರವನ್ನು ನಾನು ಮಾರಿದರ ಪರಿಣಾಮ ಏನಾಯಿತು?ಆಗ ನಾನು.ಇದರ ಹಂಗಿನಿಂದ ಹೊರಬಂದೆ. ಬಂಧನದಿಂದ ಮುಕ್ತಳಾದೆ.ಅದರ ಪರಿಣಾಮ.ಎಲ್ಲ ಕುರಿಗಳನ್ನು ದಾಟಿ ಬಂದೆ ನಾನು ಮುಂದೆ ತಾಯಿ ಹೇಳ್ತಾರೆ

## ಮುಂದುವರಿಯುವುದು.............